
# ಅಪರಂಜಿ



ತಿಳಿನಗೆಯ ಕಾರಂಜಿ

ಅಕ್ಟೋಬರ್-2020

## ಅಣಕು ವಿಶೇಷಾಂಕ




ಬಿಡಿ ಪ್ರತಿ: ರೂ.10.00

**ಸಂಪಾದಕ ಮಂಡಳಿ**

**ಸಂಪಾದಕರು**

ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**

ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**

ಶ್ರೀ ಎಚ್.ಎನ್. ಆನಂದ

ಶ್ರೀ ಎಚ್. ಗೋಪಾಲಕೃಷ್ಣ

**ಆಡಳಿತ ಮಂಡಳಿ**

**ಮ್ಯಾನೇಜಿಂಗ್ ಟ್ರಸ್ಟಿ**

ಶ್ರೀ ಉಲ್ಲಾಸ ರಾಯಸಂ

**ಟ್ರಸ್ಟಿಗಳು**

ಶ್ರೀ ಎಂ ಶಿವಕುಮಾರ್

ಶ್ರೀ ಬೇಲೂರು ರಾಮಮೂರ್ತಿ

ಶ್ರೀ ಎಚ್.ಎನ್. ಆನಂದ

ಶ್ರೀ ಸಿ.ಆರ್. ಸತ್ಯ

ಶ್ರೀ ಕೆ. ರವೀಂದ್ರ ರಾವ್

ಶ್ರೀ ವಿ. ಆರ್. ಭರತ್

**ಚಂದಾ ವಿವರ:**

**ಬಿಡಿ ಪ್ರತಿ: ರೂ. 10/-**

**ವಾರ್ಷಿಕ ಚಂದಾ: ರೂ. 100/-**

**ಹತ್ತು ವರ್ಷದ ಚಂದಾ: ರೂ. 750-**

ಸಂಪರ್ಕ ಸಮಯ:

ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ: ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ.



# ಅಪರಂಜಿ

ತಿಳಿನಗೆಯ ಕಾರಂಜಿ

**ಸಂಪುಟ 38**

**ಸಂಚಿಕೆ - 1**

**ಅಕ್ಟೋಬರ್-2020**

## *ಈ ಸಂಚಿಕೆಯಲ್ಲಿ.....*

| | | |
|---|---|---|
| ಅಪರಂಜಿ ಕಿಡಿ | ಪ್ರಕಾಶ್ | 2 |
| ನಮ್ಮ ನಿಮ್ಮಲ್ಲಿ | ಶಿವಕುಮಾರ್ | 3 |
| ಅಣಕವಾಡಿನ ಅಂಗಳದಲ್ಲಿ | ಎನ್. ರಾಮನಾಥ್ | 4 |
| ನೀ ಬರುವ ಹಾದಿಯಲಿ | ರಾ.ಶಿ. | 8 |
| ಹಸ್ತಾಕ್ಷರ | ಪ್ರಕಾಶ್ | 10 |
| ರತ್ನ ಮದಿರಾ ವಿಲಾಸ | ಶಿವು | 12 |
| ಕಸ ಕಸ ಕಸವೆಂದು | ಬೇಲೂರು | 14 |
| ಅವತಾರ ಪುರುಷನ... | ವಿ.ಕೆ. ಶ್ರೀನಿವಾಸನ್ | 15 |
| ತುಂತುರು | ದಂಣಆ | 19 |
| ಆಯ್ದ ಹನಿಗವನಗಳು | ಅ.ರಾ.ಮಿತ್ರ | 20 |
| ಹನಿಗವನಗಳು | | 21 |
| ವಿನಾಶದ ಪರಂಪರೆಗೆ... | ರಘುನಾಥ ಚ.ಹ. | 22 |
| ಮರ ಹೆತ್ತ ನಗರ | ಗೌತಮ | 25 |
| ಶುಕೋಪದೇಶ | ಶಿವು | 27 |
| ಮಂಕಿಲ್ಲದ ತಿಮ್ಮನ ಕಗ್ಗ | ಚಿತ್ರಾ ರಾಮಚಂದ್ರನ್ | 29 |
| ಗಿಣಿ ಕಪಿ | ಆನಂದ | 31 |
| ವಾನರ ಪರ್ವ | ಬೇಲೂರು | 32 |
| ಮಂಕಿಗೆ ಮಾರಲ್ಸ್ ಇಲ್ಲ | ಎಂ.ಎಸ್.ನರಸಿಂಹಮೂರ್ತಿ | 34 |
| ಶ್ರಾವಣದ ಮಂಗ್ಯಾನ ಆಟ | ಕೆ.ಎಸ್. ನಾಗರತ್ನ ಭಟ್ | 36 |
| ತಿಂಮನ ತಲೆ | ಎನ್. ರಾಮನಾಥ್ | 38 |

ಮುಖಪುಟ ವ್ಯಂಗ್ಯಚಿತ್ರ ಕೃಪೆ : ವಾಟ್ಸಾಪ್ ಕೃಪೆ

*ಪ್ರಕಾಶಕರು :* ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು – 560 003. email: koravanji42@hotmail.com ದೂರವಾಣಿ: 080-23345259

*ಸಂಪರ್ಕ ವಿಳಾಸ:* **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು – 560 068. ದೂರವಾಣಿ: 080-26688488. email: belururamamurthy@gmail.com

*ಮುದ್ರಣ : ರವಿ ಗ್ರಾಫಿಕ್ಸ್ – ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್*



# ಅಪರಂಜಿ ಕಿಡಿ

●ಪ್ರಕಾಶ್

**ಭಾರತರತ್ನ ಗೌರವಕ್ಕೆ ಭಾಜನರೂ, ಅಜಾತಶತ್ರುವೆಂದು ಹೆಸರಾಗಿದ್ದವರೂ ಆದ ಪ್ರಣಭ್ ಮುಖರ್ಜಿಯವರಿಗೆ ಅಪರಂಜಿಯ ಅಶ್ರುಪೂರಿತ ವಿದಾಯ !**

***

" ಚಂದನವನಕ್ಕೆ ನಶೆಯ ನಂಟು " – ಪತ್ರಿಕೆ

**ಆಹಾ, ಶೀರ್ಷಿಕೆಯೆಂದರೆ ಹೀಗಿರಬೇಕು !!**

***

ನೋಡಲ್ ಅಧಿಕಾರಿ ನಿರ್ಲಿಪ್ತ – ಪತ್ರಿಕೆ

**ಅವರು ನೋಡದಿರಲ್ ಎಂಬ ಧೋರಣೆ ತಾಳಿರುವರಂತೆ !!**

***

ಹನ್ನೆರಡು ಜನರ ಡ್ರಗ್ಗಿಣಿ ಗ್ಯಾಂಗ್ – ಪತ್ರಿಕೆ

**ನಿಘಂಟು ತೆರೆಯ ಬೇಕು ಈಗ !!**

***

ಸಂಗೊಳ್ಳಿ ರಾಯಣ್ಣ ವಿವಾದ ಈಗ ಸುಖಾಂತ
– ಬೆಳಗಾವಿ ಸುದ್ದಿ

**ಹಿರಿಯ ಆತ್ಮ ನಿಟ್ಟುಸಿರಿತಂತೆ !!**

***

ಸೋನಿಯಾ ರಾಜೀನಾಮೆ : ಮರು ನೇಮಕ
– ದೆಹಲಿ ಸುದ್ದಿ.

**ಡೈ–ನ್ಯಾಸ್ಟಿ ಸುಲಭವಾಗಿ ನಿವೃತ್ತರಾಗಲು ಬಿಡಬೇಕಲ್ಲ !!**

***

ಅದೃಷ್ಟದ ಕಲ್ಲೆಂದು ಮಾರಲು ಯತ್ನ ; ಬಂಧನ – ಪತ್ರಿಕೆ

**ಬಂಧಿತರ ದುರಾದೃಷ್ಟ!!**

# ನಮ್ಮ ನಿಮ್ಮಲ್ಲಿ

♦ಶಿವಕುಮಾರ್

ಅಣಕು ಬರಹಗಳಿಗೆ ಮೀಸಲಾಗಿರುವ ಈ ವಿಶೇಷಾಂಕವನ್ನು ಬಹು ಉತ್ಸಾಹದಿಂದ ನಿಮ್ಮ ಮುಂದಿಡುತ್ತಿದ್ದೇವೆ. ಆಗಸ್ಟ್ ತಿಂಗಳ ಸಂಚಿಕೆಯಲ್ಲಿನ ಸ್ಪರ್ಧಾ ಫಲಿತಾಂಶದ ಲೇಖನಗಳಿಗೆ ಇದರಲ್ಲಿ ಸಿಂಹಪಾಲು. ಈ ಲೇಖನಗಳ ಬಗ್ಗೆ ವಿವರ ಪರಿಚಯವನ್ನು ಆ ವಿಭಾಗದ ಮೊದಲ ಪುಟದಲ್ಲಿ ನೋಡಬಹುದು. ಗೆಳೆಯ ರಾಮನಾಥ್ ಅವರು ಬರೆದಿರುವ ಪ್ರಧಾನ ಪ್ರಬಂಧದಲ್ಲಿ ಅವರು ಅಣಕು ಕವನಗಳ ಉಗಮ ಮತ್ತು ಬೆಳವಣಿಗೆಯನ್ನು ನಿದರ್ಶನಗಳೊಡನೆ ಬಹು ಆಸಕ್ತಿ ಮೂಡಿಸುವಂತೆ ಚಿತ್ರಿಸಿದ್ದಾರೆ. ಸಾಹಿತ್ಯ ಜಗತ್ತಿನಲ್ಲಿ ಖ್ಯಾತನಾಮರಾದ ಕುವೆಂಪು, ಕೆ.ಎಸ್.ನರಸಿಂಹಸ್ವಾಮಿ, ಜಿ.ಪಿ,ರಾಜರತ್ನಂ ಇವರುಗಳ ಕವನಗಳ ಅಣಕು ಅವತರಣಿಕೆಗಳನ್ನು ಈ ಸಂಚಿಕೆಯಲ್ಲಿ ಕಾಣಬಹುದು. ಈ ಸಂಚಿಕೆಯನ್ನು ತಯಾರಿಸುವ ತರಾತುರಿಯಲ್ಲಿದ್ದಾಗ ಜಿ.ಪಿ.ರಾಜರತ್ನಂ ಅವರ ರತ್ನನ ಪದಗಳು ಹೊತ್ತಗೆ ಮೇಲೆ ಕಣ್ಣಾಡಿಸಬೇಕಾಯಿತು. ಅದರಲ್ಲಿ ರತ್ನರ ಕವನಗಳಿಗೆ ಶಿವರಾಮ ಕಾರಂತರು ಚಿತ್ರ ರಚಿಸಿರುವುದನ್ನು ಕಂಡು ಬೆರಗಾದೆ. ಕಾರಂತರ ಚಿತ್ರ ರಚನಾ ಕೌಶಲ್ಯದ ಬಗ್ಗೆ ಇದೊಂದು ಹೊಸ ಮಾಹಿತಿ ದೊರಕಿದಂತಾಯಿತು. ಆ ಚಿತ್ರವನ್ನು ಈ ಸಂಚಿಕೆಯಲ್ಲಿ ಕಾಣಬಹುದು. ರಾ.ಶಿ ಯವರು ತಮ್ಮ ಕೆಣಕೋಣು ಬಾರ ಪುಸ್ತಕದಲ್ಲಿ ರಚಿಸಿರುವ ಅಣಕವಾಡುಗಳಿಗೆ ಖ್ಯಾತ ವ್ಯಂಗ್ಯಚಿತ್ರಕಾರ ರಾಮಮೂರ್ತಿ ಬಹು ಕೌಶಲಯುಕ್ತ ಚಿತ್ರಗಳನ್ನು ಹೊಂದಿಸಿದ್ದಾರೆ. ಅವರ ವ್ಯಂಗ್ಯಚಿತ್ರವೊಂದನ್ನು ರಾ.ಶಿಯವರ ಅಣಕವಾಡಿನೊಂದಿಗೆ ಹೊಂದಿಸಿದೆ.

ಬಹು ಹಿಂದೆ ನಾನು ತೇಜಸ್ವಿಯವರನ್ನು ನೋಡಲು ವರ್ಷಕ್ಕೊಮ್ಮೆ ಮೂಡಿಗೆರೆಗೆ ಹೋಗುತ್ತಿದ್ದೆ. ಒಮ್ಮೆ ಅವರು ತಮ್ಮ ಹೊಸ ಪುಸ್ತಕ ಮಾಯಾಲೋಕದ ಬಗ್ಗೆ ತಮ್ಮ ಚಿಂತನೆಯನ್ನು ನನ್ನೊಡನೆ ಹಂಚಿಕೊಂಡಿದ್ದರು. ತಮ್ಮ ಪುಸ್ತಕಕ್ಕೆ ತಾವೇ ಚಿತ್ರಗಳನ್ನು ರಚಿಸುವ ವಾಡಿಕೆಯಿದ್ದ ಅವರು ಈ ಹೊಸ ಪುಸ್ತಕಕ್ಕೆ ಒಂದು ವಿಶಿಷ್ಟ ರೀತಿಯಲ್ಲಿ ಚಿತ್ರಗಳನ್ನು ಹೊಂದಿಸುವ ಚಿಂತನೆಯನ್ನು ವಿವರಿಸಿದ್ದರು, ಅನಂತರ ಪುಸ್ತಕ ಪ್ರಕಟನೆಯಾದಾಗ ತಮ್ಮ ಮೊದಲ ಮಾತಿನಲ್ಲಿ ಆ ಚಿಂತನೆಗೆ ಒಂದು ರೂಪ ಬಂದಿತ್ತು. ಅವರ ಈ ಮಾತುಗಳನ್ನು ನೋಡಿ. "ಈ ಪುಸ್ತಕಕ್ಕೆ ನಾನು ಹೊಂದಿಸಿರುವ ಚಿತ್ರಗಳು ಕೇವಲ ಅಲಂಕಾರಕ್ಕಾಗಿ ಅಲ್ಲ. ಇದೊಂದು ಕೊಲಾಜ್. ಕಥಾ ಪ್ರತಿಮೆಗಳೂ, ದೃಶ್ಯ ಪ್ರತಿಮೆಗಳೂ ಓದುತ್ತ ಹೋದಂತೆ ಒಂದರಮೇಲೊಂದು ಸಂಯೋಜನೆಗೊಳ್ಳುತ್ತಾ ಮಾಯಾಲೋಕವೊಂದನ್ನು ಸೃಷ್ಟಿಸುತ್ತವೆ. ಇದೊಂದು ಬೆಟ್ಟುತೋರಿಸಿ ನಿರ್ದೇಶಿಸಲಾರದಷ್ಟು ಸೂಕ್ಷ್ಮ ಮತ್ತು ಪರೋಕ್ಷ ಕ್ರಿಯೆ". ಈ ಸಂಚಿಕೆಯಲ್ಲಿನ ಸ್ಪರ್ಧಾ ವಿಭಾಗಕ್ಕೆ ಈ ಬಗೆಯ ದೃಶ್ಯ ಸಂಯೋಜನೆಯ ಪ್ರಯೋಗವನ್ನು ಕೈಗೊಂಡಿದ್ದೇವೆ. ಅದರ ಯಶಸ್ಸಿನ ಮಟ್ಟ ನಿಮ್ಮ ನಿರ್ಧಾರಕ್ಕೆ ಬಿಟ್ಟದ್ದು.

ನಮ್ಮ ಈ ಅಣಕು ಗದ್ಯ ಲೇಖನಗಳನ್ನು ಓದಿ ಅದರ ಬಗ್ಗೆ ಒಂದು ವಿಶ್ಲೇಷಣೆಯನ್ನು ಬರೆದು ಇಡೀ ಪ್ರಯೋಗಕ್ಕೆ ಒಂದು ಸುಂದರ ಚೌಕಟ್ಟನ್ನು ಕೃಪೆ ಮಾಡಿರುವ ಸಾಹಿತಿ ಮತ್ತು ಪತ್ರಕರ್ತ ಶ್ರೀ ರಘುನಾಥ್.ಚ.ಹ. ಅವರಿಗೆ ಅಪರಂಜಿ ಆಭಾರಿ.

ಸಂಚಿಕೆ ನಿಮಗೆ ಇಷ್ಟವಾದರೆ ದಯವಿಟ್ಟು ನಿಮ್ಮ ಪ್ರತಿಕ್ರಿಯೆಯನ್ನು ವಾಟ್ಸಪ್ ಮಾಡಿ. ಅಪರಂಜಿಯ ವಾಟ್ಸಪ್ ಸಂಖ್ಯೆ +918618081424 ನಮ್ಮ ನಿಮ್ಮ ಸಂವಹನಕ್ಕೆ ಇದು ಬಹು ಸುಲಭ ಮಾರ್ಗ. ನಿಮ್ಮೆಲ್ಲರಿಗೂ ಶುಭಕಾಮನೆಗಳು.

# ಅಣಕವಾಡಿನ ಅಂಗಳದಲ್ಲಿ...

**●ಎನ್. ರಾಮನಾಥ್**

"ಪ್ರಿಯೆ, ನುಡಿದರೆ ಮುತ್ತಿನ ಹಾರದಂತಿರಬೇಕು" ಎಂದ ನಲ್ಲ. "ಪ್ರಿಯಾ, ನೀನೆನ್ನೊಡನೆ ಮತ್ತೆ ನುಡಿಯಬೇಕೆಂದರೆ ಮುತ್ತಿನ ಹಾರ ತಂದಿರಬೇಕು" ಎಂದಳು ನಲ್ಲೆ. "ಹಾರದಂತಿರಬೇಕು" ಎನ್ನುವುದು "ಹಾರ ತಂದಿರಬೇಕು" ಆಗಿ ಬದಲಾಗುವುದರಲ್ಲಿ ಮೊದಲಿನ ವಾಕ್ಯದ ಗಂಭೀರತೆ ಕಳೆದು ಹಾಸ್ಯದ ಉಗಮವಾಯಿತು. ಅದರ ಒಳ–ಎಳೆಯಲ್ಲಿ ನಲ್ಲೆಯನ್ನು ಚೀಪ್ ಆಗಿ ಪಡೆಯಲು ಸಾಧ್ಯವಿಲ್ಲ, ಪ್ರೀತಿ ಬೆಳೆಯುವಷ್ಟರಲ್ಲಿ ಪರ್ಸು ಸೊರಗುತ್ತದೆ ಎಂಬ ಅರಿವಿನ ಸೆಲೆಯೂ ಹರಿದುಬಂದಿದೆ. ಅಣಕವಾಡುಗಳ ವೈಶಿಷ್ಟ್ಯವೇ ಇದು. ಮೂಲದ ಗಾಂಭೀರ್ಯವನ್ನು ಪಲ್ಲಟಗೊಳಿಸಿ, ಮೂಲಹಾಡಿನ ಪದಗಳನ್ನು ಇನಿತಿನಿತೇ ಸವರಣೆಗೊಳಿಸಿ, ವಿಷಯವನ್ನು ನವಿರಾದ ಹಾಸ್ಯದ ಮೂಲಕ ಪರಿಚಯಿಸುತ್ತಾ ಜನರಲ್ಲಿ ಅರಿವು ಮೂಡಿಸುವ ಸಾಧನವೇ ಹಾಸ್ಯದ ಹಲವಾರು ವಿಧಗಳಲ್ಲಿ ಪ್ರಮುಖವಾದ ಅಣಕವಾಡು.

ಕೇಶಿರಾಜನ ಕಾಲದಿಂದ ಕೇಶವಿರಲಿ, ತಲೆಯೂ ಇಲ್ಲದವರು ರಾಜರಾಗಿರುವ ಕಾಲದವರೆಗೆ ಅಣಕವಾಡುಗಳ ಸಾಮ್ರಾಜ್ಯ ಹಬ್ಬಿದೆ. ಕಾಲನ ಕಾಲ್ತುಳಿತಕ್ಕೆ ಸಿಕ್ಕಿ ಅಂದಿಗಂದಿಗೆ ಮೆರೆದ ಎಷ್ಟೋ ಅಣಕವಾಡುಗಳು ಇಂದಿಗೆ ಅಪ್ರಸ್ತುತವೆನಸಿದ್ದರೂ ನೂರಾರು ಅಣಕವಾಡುಗಳು ಕಾಲನಿಗೂ ಕ್ಯಾರೇ ಅನ್ನದೆ ಚಿರಂಜೀವತ್ವ ಪಡೆದಿವೆ.

***ಮರಣಮಂಡಲ ಮಧ್ಯದೊಳಗೆ ಕರುಣರಹಿತರ ಬಸಿರ ತುಂಬಲು***
***ತೆರುವ ತೆರಿಗೆಯ ಹೊರೆಯ ತಡೆಯದೆ ಸುರುಳಿಬಿದ್ದನು ಬೋರನು***

***ಬಿದ್ದ ಬೋರೇಗೌಡನನ್ನು ಎದ್ದುನಿಲ್ಲಿಸಿ ತಡವಿ ತಟ್ಟಿ***
***ಮುದ್ದುವಚನದಿ ಮರುಳುಗೈದು ಕದ್ದರಿದ್ದುದನೆಲ್ಲವ***

***ಅಯ್ಯ ನೀನು ದುಡಿಯಲೇಕೆ ಕೈಯ ನೇಗಿಲಿಗಿಕ್ಕಲೇಕೆ***
***ಮೈಯ ಕುಗ್ಗಿಸಿ ಮಡಿಯಲೇಕೆ ಜೀಯ ಲಾಲಿಸು ಪೇಳ್ವುದ***

***ಮರಳುಮಡುವನು ಗದ್ದೆ ಮಾಡುವೆ ಹರಳು ಹೊನ್ನನು ನೆಲದಿ ತೋಡುವೆ***
***ಕೊರಳ ತಾ ಎನ್ನ ತರಳ ಎನುತ ಸರಳ ಬಡ್ಡಿಯ ತೊಡಿಸಿದ***

ಕನ್ನಡಕ್ಕೊಬ್ಬನೇ ಕೈಲಾಸಂ ಎಂದು ಖ್ಯಾತಿವೆತ್ತರಾದ ಟಿ.ಪಿ. ಕೈಲಾಸಂ ಸ್ಥಳದಲ್ಲೇ ರಚಿಸಿದ 'ಧರಣಿಮಂಡಲ ಮಧ್ಯದೊಳಗೆ' ಜನಪದ ಗೀತೆಯ ಅಣಕವಾಡಾದ ಈ 'ಬೋರನ ಭಾರ' ರೈತ ದೇಶದ ಬೆನ್ನೆಲುಬಾದರೆ ರಾಜಕಾರಣಿ ಬೋನ್ ಕ್ಯಾನ್ಸರ್ ಎನ್ನುವುದನ್ನು ಸಮರ್ಪಕವಾಗಿ ಬಿಂಬಿಸುತ್ತದೆ. ಸರ್ಕಾರದ ಗೋಮುಖವ್ಯಾಘ್ರತೆಗೆ ಹಿಡಿದ ಭೂತಗನ್ನಡಿಯಾದ ಈ ಅಣಕವಾಡು ಸರ್ವಕಾಲಕ್ಕೂ ಸಮ್ಮತ.

ಅಣಕವಾಡಿಗೆ ಮೂಲ ಇಂತಹದೇ ಇರಬೇಕೆಂದಿಲ್ಲ. ಜನಪ್ರಿಯ ಸಾಹಿತ್ಯವೇ ಅಣಕವಾಡಿನ ವಾಹನ. ಸಂಸ್ಕೃತದ ಸುಭಾಷಿತಗಳು, ಸರ್ವಜ್ಞನ ವಚನಗಳು, ಜನಪದ ಗೀತೆಗಳು, ದಾಸರ ಕೀರ್ತನೆಗಳು, ಕವಿಪುಂಗವರ ರಚನೆಗಳು, ಭಾವಗೀತೆಗಳು, ಚಿತ್ರಗೀತೆಗಳು ಎಲ್ಲವೂ ಅಣಕವಾಡಿಗೆ ಅಡಿಪಾಯಗಳೇ. ರಾಶಿ ಎಂದೇ ಖ್ಯಾತರಾದ

ಡಾ. ಶಿವರಾಂ, ವಿದ್ವತ್ತಿನಲ್ಲೂ, ಹಾಸ್ಯದಲ್ಲೂ ತಮ್ಮ ಛಾಪು ಮೂಡಿಸಿದ ಅ.ರಾ.ಸೇ., 'ವಕೀಲನ ವಗ್ಯೆರೆಗಳು' ಮೂಲಕ ಖ್ಯಾತಿವರ್ಧಿತರಾದ ವಕೀಲ–ಹಾಸ್ಯಬರಹಗಾರ ಹಾ.ರಾ., ಅಣಕವಾಡುಗಳನ್ನು ರಚಿಸಿ ತಮ್ಮ ಶ್ರೀಕಂಠದ ಮೂಲಕ ಪ್ರಸ್ತುತಪಡಿಸುತ್ತಿದ್ದ ಗುಡಿಬಂಡೆ ರಾಮಾಚಾರ್  ಅಣಕಕ್ಷೇತ್ರಕ್ಕೆ ವಿಪುಲವಾದ ಕೊಡುಗೆ ನೀಡಿದ್ದರೂ ಇಂದಿನ ಕನ್ನಡಿಗರಿಗೆ ಅಂದಿನ ಕವನಗಳ ಪರಿಚಯ ಕಡಿಮೆಯಿರುವುದರಿಂದಲೋ, ವಿಷಯ ಅಪ್ರಸ್ತುತವಾಗುವುದರಿಂದಲೋ ಮೂಲೆಗುಂಪಾಗಿವೆ.

ರಾಶಿ ತೆರೆಮರೆಗೆ ಸರಿದು, ನಾ. ಕಸ್ತೂರಿ ಬಾಬಾ ಆಶ್ರಮಕ್ಕೆ ತೆರಳಿದಾಗ ಮೋಡ ಕವಿದಿದ್ದ ಅಣಕವಾಡಿನ ಮುಗಿಲಿಗೆ ಗಾನವಿನೋದಿನಿ ಎಂಬ ಹಾಸ್ಯತಂಡ ಮತ್ತು ಹರಟೆಮಲ್ಲ, ವಾಗ್ಮಿ ವೈ.ವಿ. ಗುಂಡೂರಾವ್ ರವಿ–ಚಂದ್ರರಾಗಿ ಉದಯಿಸಿ ಬೆಳಕು ಚೆಲ್ಲಿದರು. ವೈ.ವಿ.ಗುಂಡೂರಾವ್ ಹಾಡುತ್ತಿದ್ದ ಮಂಜುನಾಥ್ ರಚಿಸಿದ,

*ಹಂಡೆ ಕರಿಯ ಹಂಡೆ*
*ಮುತ್ತಾತ ತನ್ನ ಮದುವೇಲಿ ಪಡೆದ ಮಣಭಾರದ*
*ಭವ್ಯ ಒಡಲ ಬಹಳ ಹಳೆಯ ಹಂಡೆ ಕರಿಯ ಹಂಡೆ....*

*ಮಿಂದು ಬೆಳೆದವು ಮಕ್ಳು ಮರಿಗಳು ಸರಿದುಹೋದವು ವರ್ಷಾಂತರಗಳು*
*ದುಷ್ಕಾಲ ಬಂತಲ್ಲ ಕೊಳ್ಳಲು ಸಾಧ್ಯವೆ ಇನ್ನು ಇಂತಹ...*
*ಹಂಡೆ ಕರಿಯ ಹಂಡೆ....*

*ಈ ಹಂಡೆ ತುಂಬ ನೀರನ್ನು ಕುದಿಸಿ ಮನೆಯ ಎಲ್ಲರಿಗು ಎಣ್ಣೆಯ ಲೇಪಿಸಿ*
*ಮನಸಾರೆ ನೀರನು ಎರೆಯುವ ನೀರೆಯ ಕೈಯ ಬಳೆಗಳ ನಾದದ ಸೊಂಪು*
*ಪ್ರೀತಿ ಮಮತೆಗಳು ಬೆಸೆದಿಹ ಸೊಂಪು ಮಂದಹಾಸ ಮುಖ ತೃಪ್ತಿ ತಂದ ಸುಖ*
*ಅಂದಿನ ಸರಸ ಸೌಖ್ಯಕೆ ಸಾಕ್ಷಿ। ಹಂಡೆ ಕರಿಯ ಹಂಡೆ....*

*ಮೂವತ್ತು ಕೊಡ ನೀರು ಹಿಡಿವುದೀ ಹಂಡೆ ಮಸಿಗಟ್ಟಿ ಕಪ್ಪಾದ ತಾಮ್ರದ ಹಂಡೆ*
*ಬಳಸಲು ಯೋಗ್ಯತೆ ನಾವ್ಪಡೆದಿಲ್ಲ ಲೀಟರ್ ಲೆಕ್ಕದ ನೀರಿನ ಬಿಲ್ಲಿನ ಸಂಸ್ಕಾರಕೆ ಸೌದೆ*
*ಇಲ್ಲದ ಕಾಲ*

*ಅದಕೆ ನಾವಿಂದು ಬಾಯ್ಲರ್ ಬಳಸೆ ಮೂಲೆಯ ಹಿಡಿದು ಕೂತಿದೆ ನಮ್ಮ*
*ಹಂಡೆ ಕರಿಯ ಹಂಡೆ....*

ಎಂಬ ಹಾಡು ಹಿಂದಿನ ದಿನಗಳ ನೆನಪನ್ನು ಹಸಿರಾಗಿಸಿ ಇಂದಿನ ದುಷ್ಕಾಲವನ್ನು ಟೀಕಿಸುವಲ್ಲಿ ಯಶಸ್ವಿಯಾಗಿತ್ತು. ಅಣಕವಾಡು ಎಂದರೆ ಹಾಸ್ಯ ಮಾತ್ರವಲ್ಲ, ಗತವೈಭವ ತೋರಿಸಲೂ ಬಳಸಬಹುದು ಎಂಬುದಕ್ಕೆ ಈ ಅಣಕವಾಡು ಒಂದು ಉತ್ತಮ ಉದಾಹರಣೆ.

ಹಿಂದಿನ ದಿನಗಳ ಪರಿಚಯವಿರುವವರಿಗೆ ಟೆಲಿಗ್ರಾಂ ತರುವ ನಡುಕದ ಅನುಭವವಿದ್ದೀತು. ಕನ್ನಡಭಾಷೆ ಕಂಡ ಭಾಷಾಶ್ರೇಷ್ಠರಾದ ಶತಾವಧಾನಿ ಆರ್. ಗಣೇಶ್‌ರವರನ್ನು ಟೆಲಿಗ್ರಾಂ ಓದುವುದಕ್ಕೆ ಮುನ್ನ ಮತ್ತು ಓದಿದ ನಂತರದ ಸ್ಥಿತಿಗಳನ್ನು ಕೆ.ಎಸ್.ನ.ರವರ 'ರಾಯರು ಬಂದರು ಮಾವನ ಮನೆಗೆ ರಾತ್ರಿಯಾಗಿತ್ತು' ಕವನದ ಅಣಕವಾಡಿನ ರೂಪದಲ್ಲಿ ಹೇಳಿರೆಂದು ಪ್ರಕಾಶ್ ಎಂಬುವರು ಕೇಳಿದಾಗ ಅವರು ರಚಿಸಿದ ಅಣಕವಾಡು ಹೀಗಿದೆ:

*ತಂತಿಯು ಬಂತು ಪ್ರಕಾಶರ ಮನೆಗೆ ರಾತ್ರಿಯಾಗಿತ್ತು।*
*ಮನೆಯವರೆಲ್ಲಾ ಚಿಂತಿಸುತಿರಲು ಧುತ್ತೆಂದೊದಗಿತ್ತು – ಕುತ್ತಿನ ತುತ್ತಂತಾಗಿತ್ತು॥*

*ತಂದೆತಾಯಿಗಳ ಕಳವಳವಂತೂ ಮುಗಿಲನು ಮುಟ್ಟಿತ್ತು।*
*ನೆರೆಹೊರೆಯವರ ಕುತೂಹಲವಂತೂ ಮೇರೆಯ ಮೀರಿತ್ತು –ತೀರ*
*ಸೂರೆಯೇ ಹೋಗಿತ್ತು॥*

*ನಡುಗುವ ಕೈಗಳು ಮುಂಚಾಚಿರಲು ತಂತಿಯು ಬಂದಿತ್ತು।*
*ಬೆವರುವ ಅಂಗೈಗಳು ಮುಂದಾಗಿರೆ ತಣ್ಣನೆ ಸುಳಿದಿತ್ತು – ತಂಪಿನ*
*ಗಾಳಿಯ ತುಯ್ಲಿತ್ತು॥*

*ಕಡೆಗೂ ಬಿಡಿಸಿಯೆ ನೋಡಿದರಾಗ ಪ್ರಕಾಶರುಬ್ಬೆಗದಿ।*
*ಚುಕ್ಕಿಯ ಅಕ್ಕರಗಳು ಸಾರಿದ್ದವು ಬಿಸಿ ಬಿಸಿ ಸುದ್ದಿಯನು – ಸುಂದರ*
*ಶಿಶುವಿನ ಜನನವನು॥*

ಕೆ.ಎಸ್. ನ.ರವರ ಈ ಹಾಡಿಗೆ ಬರೆದಿರುವಷ್ಟು ಅಣಕವಾಡುಗಳನ್ನು ಪ್ರಾಯಶಃ ಇನ್ನಾವ ಹಾಡಿಗೂ ಬರೆದಿಲ್ಲವೆನಸುತ್ತದೆ. ನನ್ನ ಗಮನಕ್ಕೆ ಬಂದಂತೆಯೇ ಕಡಿಮೆಯೆಂದರೆ ಎಂಟು ಅಣಕಗಳಿವೆ. ಇತ್ತೀಚೆಗೆ ವಾಟ್ಸಪ್‌ನಲ್ಲಿ ಹರಿದಾಡಿದ, ಮಧುಸೂದನ್ ರಾವ್ ಎನ್ನುವವರು ಬರೆದ 'ರಾಯರು ಬಂದರು ಮಾವನ ಮನೆಗೆ ರಾತ್ರಿಯಾಗಿತ್ತು। ಎಂದಿನ ಹಾಗೆ ಅಂದೂ ಕೂಡ ಕರೆಂಟು ಹೋಗಿತ್ತು – ಕತ್ತಲೆ ಎಲ್ಲೆಡೆ ಹರಡಿತ್ತು' ಸಹ ಒಂದು ಸರ್ವಾಂಗಸುಂದರ ಅಣಕವಾಡು.

ಇಂದು ಅಣಕವಾಡು ಬರೆಯುವಿಕೆ ಸಾಂಕ್ರಾಮಿಕವಾಗಿ ಹರಡಿದೆ. ಇಂದಿನ ದಿನಗಳಲ್ಲಿ ಶ್ರೀಸಾಮಾನ್ಯನ ಸುತ್ತಮುತ್ತ ಕಂಡುಬರುವ ಅಪ್ರಾಮಾಣಿಕ ಜಾಲದಲ್ಲಿ ವೈದ್ಯರು, ಇಂಜಿನಿಯರ್‌ಗಳು, ವಕೀಲರು, ಹೋಟೆಲಿಗರು, ಎಲ್ಲರೂ ಸಿಲುಕಿರುತ್ತಾರೆ. ಹಣಕ್ಕಾಗಿ ಗುಣ ಮಾರಿಕೊಳ್ಳುವ ಕೆಟ್ಟ ವಕೀಲ, ಹಣಕ್ಕಾಗಿ ಹೆಣಕ್ಕೂ ಇಂಜೆಕ್ಷನ್ ಕೊಡುವ ವೈದ್ಯ, ಹಳಸು ನೀಡಿದರೂ ಝಣಝಣ ತಪ್ಪದಿರಲೆಂಬ ಹೋಟೆಲಿಗ, ಎಲ್ಲಿಗೇ ಕರೆದರೂ ಬರದ ಆಟೋ, ಅಂದಿನ ಸುಂದರ ಮನೆಗಳು ಉರುಳಿ ಆ ಸ್ಥಳದಲ್ಲಿ ಎದ್ದಿರುವ ಅಪಾರ್ಟ್‌ಮೆಂಟ್‌ಗಳಲ್ಲಿನ ಜನರ ಬವಣೆ ಎಲ್ಲವನ್ನೂ ಬಿಂಬಿಸುವ ಅಣಕವಾಡುಗಳು ಈಗ ಎಲ್ಲೆಡೆ ಕೇಳಿಬರುತ್ತಿವೆ. ಗಂಗಾವತಿಯ ಶರಣಪ್ಪ ಮೆಟ್ರಿಯವರು ಬೇಜವಾಬ್ದಾರಿ ಗಂಡಿನ ಬಗ್ಗೆ ಕೆ.ಎಸ್.ನ. ವಿರಚಿತ 'ಅಂತಿಂಥ ಹೆಣ್ಣು ನೀನಲ್ಲ...' ಗೀತೆಯ ಧಾಟಿಯಲ್ಲಿ ಬರೆದ ಈ ಅಣಕವಾಡಿನ ಗಮ್ಮತ್ತನ್ನು ನೋಡಿ:

*ಅಂತಿಂಥ ಗಂಡು ನೀನಲ್ಲ.... ನಿನ್ನಂಥ ಗಂಡು ಇನ್ನಿಲ್ಲ*

*ಮೈತುಂಬ ಕೆಲಸ ನಿನಗಿಲ್ಲ... ಕೈತುಂಬ ಕಾಸು ತರಲಿಲ್ಲ*
*ಬಂಗಾರ ಸೀರೆ ಕೊಡಲಿಲ್ಲ ನೀನೆಂಥ ಗಂಡೊ ಹುರುಳಿಲ್ಲ....*

*ಹೊಗೆಸೊಪ್ಪು ಬಾಯ ತುಂಬೆಲ್ಲ ಫುಲ್‌ಟೈಟು ಹಗಲು ಇರುಳೆಲ್ಲ*
*ಜೂಜಾಟ ನಿತ್ಯ ತಪ್ಪಿಲ್ಲ ದುರ್ನಾತ ದೂರ ಸರಿ ಮಳ್ಳ...*

*ಧನಕನಕ ದುಡಿದು ತಂದಾಗ ದುರ್ವ್ಯಸನ ಬಿಟ್ಟು ಬಂದಾಗ*
*ಸಿಂಗರವ ಮಾಡಿ ನಿಂತಾಗ ನಾ ಬರುವೆ ಹೊರಡು ನೀನೀಗ*

ಎನ್ನುತ್ತಾ ಕುಡುಕನಿಗೆ ಗೇಟ್‌ಪಾಸ್ ಕೊಡುವಾಗ ಹೆಂಡತಿ ಮಾಡುವ ನಿತ್ಯಮಂಗಳಾರತಿಗೆ ಪದಗಳನ್ನು ಹೊಂಚಿಕೊಟ್ಟಿದ್ದಾರೆ.

ಹಿರಿಯನೊಬ್ಬ  ತನ್ನ ನೆಚ್ಚಿನ ಕ್ಲಿನಿಕ್‌ಗೆ ಹೋದ. ಪಾಪ! ಅಲ್ಲಿ ಫ್ಯಾಮಿಲಿ ಡಾಕ್ಟರ್ ಎಂದರೆ ಒಂದು ಫ್ಯಾಮಿಲಿಯವರು ಕೊಡುವ ಫೀಸಿನಲ್ಲೇ ತಮ್ಮ ಇಡೀ ಕುಟುಂಬವನ್ನು ಸಾಕುವಂತಹ ಡಾಕ್ಟರೇ ಸಿಗಬೇಕೇ!

ವೈದ್ಯರಾಜ ನಮಸ್ತುಭ್ಯಂ ಯಮರಾಜ ಸಹೋದರಃ।
ಯಮಸ್ತು ಹರತಿ ಪ್ರಾಣಾನ್ ತ್ವಂ ಪ್ರಾಣಾನ್ ಧನಾನಿ ಚ॥

ಎಂಬ ಗುಡ್ ಓಲ್ಡ್ ಕಟಕಿ ಸುಭಾಷಿತಕ್ಕೆ ಧಕ್ಕೆಯಾಗದಂತೆ ಇದ್ದ ಆ ನರಸಿಂಗ–ಹೋಮವನ್ನು ನಡೆಸುವ ವೈದ್ಯರಿಬ್ಬರು ರೋಗಿ ಬರುತ್ತಿರುವುದನ್ನು ಕಾಣುತ್ತಲೇ ತಮ್ಮತಮ್ಮಲ್ಲೇ ಹಾಡಿಕೊಂಡ 'ಮೆಲ್ಲುಸಿರೇ ಸವಿಗಾನ' ಧಾಟಿಯ ಯುಗಳ ಅಣಕಗೀತೆಯ ಪರಿ ಇಂತಿದೆ:

***ಮೇಲುಸಿರೆ ಸವಿಗಾನ ಎದೆ ಢಂ ಎನೆ ಕಾಸಿನ ತಾಣ...***

***ಮನದಲ್ಲಿ ಮೂಡಿದ ಭಯಕೆ ಹಿತವಾದ ನುಡಿಯುವುದೇಕೆ***
***ಮಧುಮೇಹಕೆ ಹೃದ್ರೋಗಕೆ ಇರಬೇಕು ಅಂಜಿಕೆ ಶಂಕೆ***

***ಜಠರಾಗ್ನಿ ನಿನ್ನನು ಸುಡಲು ಇರುಳಾಗಿ ಮೂಡಿತು ಹಗಲು***
***ಹೊರಳಾಡಿದೆ ಚೀರಾಡಿದೆ ಹಾರೈಸಿ ವೈದ್ಯನ ಹೆಗಲು....***

***ನಿನ ದೇಹ ಕಸಮಯ ಸದನ ನಿನ ಸ್ನೇಹ ನಿಧಿ ಸಂಚಯನ***
***ಚಿರನೋವಿನ ಆಕ್ರಂದನ ನಮಗಂತು ಇಂಪಿನ ಗಾನ....***

ಎಲ್ಲೆಲ್ಲೂ ಮಾಲಿನ್ಯವಿದ್ದು ಪರಿಸರವನ್ನು ಶುಭ್ರವಾಗಿಸಿಕೊಳ್ಳಬೇಕೆಂಬ ಈ ದಿನಗಳಲ್ಲಿ 'ಕೊಳಕೇ ಬಂಗಾರವಾಯಿನಾ...' ಎನ್ನುತ್ತಾ ಕೂಡದಿರಲು ಎಚ್ಚರಿಕೆಯೊಂದನ್ನು ನೀಡುತ್ತಾ ಈ ಅಣಕಜಾಡಿಗೆ ಮುಚ್ಚಳ ಹಾಕೋಣ. ಅಂದು ನಲ್ಲ–ನಲ್ಲೆ ಕೆರೆಯ ದಡದಲ್ಲಿ ಕುಳಿತಾಗ ಕಂಡದ್ದು 'ನೀರಿನಲ್ಲಿ ಅಲೆಯ ಉಂಗುರ...'. ಈಗ...

***ನೀರಿನಲ್ಲಿ ಕಲುಷದುಂಗುರ ಭೂಮಿ ಮೇಲೆ ಧೂಮದುಂಗುರ***
***ದಿನಕಳೆದಂತೆಲ್ಲ ಹೆಚ್ಚಾಯ್ತಲ್ಲ ಭುವಿಯ ಮೇಲೆ ಮಲಿನದುಂಗುರ...***

***ಅಂದಿನದು ಎಷ್ಟು ಸುಂದರ ಮಧುರ ಸ್ಮೃತಿ ಮನಕೆ ಇಂಚರ***
***ತರುವ ಲತೆಯ ಕೀಳುವ ತೆರದಿ ವನವ ಕಳೆವ ರೀತಿ ಭೀಕರ***

***ಮಣ್ಣಿನಲ್ಲಿ ಕೃತಕ ಗೊಬ್ಬರ ಹಣ್ಣಿನಲ್ಲಿ ಪೌಡರುಂಗುರ***
***ಬೆಳೆಗೆ ಕೀಟಧ್ವಂಸಿಯುಂಗುರ ಸೇವಿಪರಿಗೆ ಉರುಳಿನುಂಗುರ***

***ಹೀಗೆ ನಡೆಯೆ ಕೈಯ ಸಂಚರ ಕರೆಸಬೇಕು ಡ್ರಮ್ಮು ಹೊಡೆವರ***
***ನಾಡ ಹಿತಕೆ ಇದುವೆ ಡಂಗುರ ಮಲಿನಹೀನ ಬದುಕು ಸುಂದರ***

ಅಣಕದ ಅಂಗಳಕ್ಕೆ ಬೇಲಿ ಇಲ್ಲ. ಒತ್ತುವರಿ ಮಾಡಿಕೊಂಡಷ್ಟೂ ದೊರೆಯುವ ಸರ್ಕಾರದ ಜಮೀನಿನಂತೆ ಇರುವ ಅಣಕದಂಗಳದಲ್ಲಿ ಅಣಕಪುಷ್ಪಗಳ ಕಾನನವೇ ಇದೆ. ನದಿಯ ನೀರು ಎಷ್ಟಿದ್ದರೂ ಬೊಗಸೆಯಷ್ಟೇ ಬಾಯಿಗೆ. ಈ ಅಂಕಣಕ್ಕೆ ಇದೊಂದು ಅಣಕದ ಕಣ. ಓದುವವರಿಗೆ ಹ್ಲಾದನ; ಹಾಡುವವರಿಗೆ ಹೂರಣ. ■

# ನೀ ಬರುವ ದಾರಿಯಲಿ

ಮೂಲ ಕವನ : ಕೆ.ಎಸ್ ನರಸಿಂಹ ಸ್ವಾಮಿ

ಅಣಕವಾಡು : **ರಾ.ಶಿ.**

[ಕವಿ ಕೆ.ಎಸ್.ನರಸಿಂಹಸ್ವಾಮಿಯವರು ಬರೆದಿರುವ ದೀಪದ ಮಲ್ಲಿ ಕವನ ಸಂಗ್ರಹದಿಂದ ಆಯ್ದ "ನೀ ಬರುವ ದಾರಿಯಲಿ" ಎಂಬ ಕವನವನ್ನು ಆಧರಿಸಿ ರಾ.ಶಿ.ಯವರು ಈ ಅಣಕವಾಡನ್ನು ರಚಿಸಿದ್ದಾರೆ. ಮುದ್ದಿನ ಮಡದಿ ತವರೂರಿನಿಂದ ಹಿಂತಿರುಗಿ ಎತ್ತಿನ ಗಾಡಿಯಲ್ಲಿ ಬರಲು ಹೊರಟಿದ್ದಾಗ ಕವಿ ಆಕೆಯ ಪ್ರಯಾಣ ಸುಗಮವಾಗಲೆಂದು ಹಾರೈಸುವ ಈ ಕವನವನ್ನು ಅಣಕು ಕವಿ, ಒಬ್ಬ ಕುದುರೆ ಜೂಜಿನಲ್ಲಿರುವ ಕನ್ನಡ ಭಕ್ತ ತನ್ನ ಕುದುರೆ ಗೆಲ್ಲಲೆಂದು ಹಾಡುವ ಹಾರೈಕೆಯನ್ನಾಗಿ ನೋಡಿದ್ದಾನೆ. ಚಿತ್ರ ರಚನೆ ಖ್ಯಾತ ಚಿತ್ರಕಾರ ರಾಮಮೂರ್ತಿ]

**ನೀ ಬರುವ ದಾರಿಯಲಿ**
**ಹುಲ್ಲು ಹಸನಾಗಿ**
**ಸಾಲ್ ಸಾಲು ಕಂಭಗಳು**
**ಥಳಿಸಿ ಬೆರಗಾಗಿ**
**ಪಂದ್ಯ ಮುಗಿಯುವ ತನಕ**
**ಎಳೆಬಿಸಿಲು ಬರುವನಕ**
**ತುಂತರ್ಹನಿ ಅಲ್ಲೆಲ್ಲ ನೆಲವ ತಣಿಸಿರಲಿ**



ನೀ ಬರುವ ದಾರಿಯಲಿ
ಸೊಕ್ಕಿಗರು ಕೂಗಿ
ಕಿರಿಸಂಜೆ ತಂಪಿನಲಿ
ಕಾಲ್ಜೋಡಿಯೋಡಿ
ಟ್ರೋಫಿಕಾಣಲಿ ನಿನ್ನ
ಕಣ್ಣ ಬಳಿ ಬೆನ್ನ
ಹತ್ತಾರು ಹಳಿಗೆಯಲಿ ಹಾದಿ ಹಾರಿರಲಿ

ನೀ ಬರುವ ದಾರಿಯಲಿ
ಹಣದಾಸೆ ಸುಳಿದು
ಸಂತಸವ ತೋರಿರಲಿ
ಆಗುವುದ ನುಡಿದು
ಮುಂದೆ ಕಾದಿಹ ನೂರು
ಹರುಷಗಳ ಕಣ್ತೆರೆದು
ಪಂದ್ಯವೋ ಕುಣಿಗಳೋ ನೀನರಿಯುವಂತಿರಲಿ

■

---



# ಹಸ್ತಾಕ್ಷರ

ಮೂಲ ಕವನ : ಕುವೆಂಪು                    ಅಣಕು ಕವನ : **ಪ್ರಕಾಶ್**

[1946ರಲ್ಲಿ ಕುವೆಂಪು ಅವರು ರಚಿಸಿದ ಪಕ್ಷಿಕಾಶಿ ಎಂಬ ಪುಸ್ತಕದಲ್ಲಿನ "ದೇವರು ರುಜು ಮಾಡಿದನು" ಎಂಬ ಕವನದ ತಳಹದಿಯಲ್ಲಿ ಪ್ರಕಾಶ್ ರವರು ಈ ಅಣಕವಾಡನ್ನು ರಚಿಸಿದ್ದಾರೆ. ಮೂಲ ಕವಿತೆಯಲ್ಲಿ ಕವಿ ಪ್ರಕೃತಿಸೌಂದರ್ಯವನ್ನು ಭಾವಪರವಶನಾಗಿ ಆಸ್ವಾದಿಸುತ್ತಿರುವಾಗ ದೂರ ಗಗನದ ನೀಲ ಪರದೆಯ ಹಿನ್ನೆಲೆಯಲ್ಲಿ ಬೆಳ್ಳಕ್ಕಿಗಳು ಸಾಲು ಹಿಡಿದು ಹಾರುತ್ತಾ ಬರುತ್ತವೆ. ಕವಿಯ ಕಣ್ಣಿಗೆ ದೇವರು ತಾನು ರಚಿಸಿರುವ ಮನೋಹರ ಚಿತ್ರಪಟಕ್ಕೆ ಕೊನೆಯಲ್ಲಿ ಹಾಕುವ ರುಜುವಿನಂತೆ ಕಾಣುತ್ತದೆ ಈ ಹಕ್ಕಿಗಳ ಸಾಲು.. ಚಿತ್ರ ರಚನೆ : ಬಾಗೂರು ಮಾರ್ಕಾಂಡೇಯ ]

**ಮಂತ್ರಿಯು ರುಜು ಮಾಡಿದನು**
**ಸಂತಸದಿಂದಲಿ**
**ನಾನದ ನೋಡಿದೆನು**

**ಫೈಲಿನ ರಾಶಿಯು ಗಗನಕ್ಕೇರಿರೆ**
**ಅರ್ಜಿಯ ಕಾಗದ ಚಿಂದಿಯಾಗುತ್ತಿರೆ**
**ನನ್ನಾಕಾಂಕ್ಷೆಯ ತೊರೆಯೇ ಬತ್ತಿರೆ**
**ಸಹನೆಯ ಎಲ್ಲೆಯು ಮಾಸುತ ಕಿತ್ತಿರೆ**
**ಮಂತ್ರಿಯು ರುಜು ಮಾಡಿದನು**
**ಸಂತಸದಿಂದಲಿ**
**ನಾನದ ನೋಡಿದೆನು**



ಬರಹರಿದಿತ್ತು ಸಚಿವರ
ಮೊಗದಲಿ
ನಗೆ ಬಿರಿದಿತ್ತು
ವಿಧಿ ವಿಧಾನಗಳ ತೆರೆ ಸರಿದಿತ್ತು
ನಾನಾ ರೂಪದ ಸಿರಿ ಸಂಪತ್ತಿನ
ಹೊಂಬಿಸಿಲೆತ್ತಲು ಹರಡಿತ್ತು

ಬಾಗಿಲ ಹೊರಗಡೆ ಪುಡಾರಿ ಸಂತೆ
ಮುತ್ತಿದ ಜನರಿಗೆ ಸ್ವಾರ್ಥದ ಚಿಂತೆ
ಮೇಜಿನ ಎಲ್ಲೆಡೆ ಕಡತದ ಕಂತೆ
ಪಿ.ಎ. ಕುಳಿತಿಹ ಬುದ್ಧನಂತೆ
ಶಿಶಿರದಿ ವಸಂತ ಮೂಡುವಂತೆ
ಮಂತ್ರಿಯು ರುಜು ಮಾಡಿದನು
ಸಂತಸ ಸಗ್ಗದಿ
ನಾನದ ನೋಡಿದೆನು

■

---

ಕಲಿಯುಗದಲ್ಲಿ ವೃದ್ಧಾಪ್ಯ !!



# ರತ್ನ ಮದಿರಾ ವಿಲಾಸ

ಮೂಲ ಕವನ : ಜಿ.ಪಿ.ರಾಜರತ್ನಂ. ಅಣಕುವಾಡು : **ಶಿವು**

[1934ರಲ್ಲಿ ರತ್ನ ಎಂಬ ಕಾವ್ಯನಾಮದಡಿಯಲ್ಲಿ ಶ್ರೀಯುತ ಜಿ.ಪಿ. ರಾಜರತ್ನಂ ಅವರು ರಚಿಸಿದ ರತ್ನನ ಪದಗಳು ಪುಸ್ತಕದಲ್ಲಿನ ಕನ್ನಡ ಪದಗಳು ಎಂಬ ಕವನ ಈ ಅಣಕವಾಡಿನ ಮೂಲ. ಆ ಕವನದ ಶೈಲಿ ಆಗಿನ ಕಾಲಕ್ಕೆ ತೀರ ಪ್ರಗತಿಶೀಲ ಎನ್ನಬಹುದಾಗಿತ್ತು. ಹೆಂಡಕುಡುಕ ರತ್ನ "ಯೆಂಡ ಯೆಡ್ತಿ ಕನ್ನಡ್ ಪದಗೊಳ್ ಅಂದ್ರೆ ರತ್ನಂಗ್ ಪ್ರಾಣ" ಅಂತ ಪ್ರಾರಂಭಿಸುತ್ತಾನೆ. ಈ ಕವನವನ್ನ ನಮ್ಮ ಕುಮಾರವ್ಯಾಸನ ಕಾಲದಿಂದ ಕವಿಗಳ ಅಚ್ಚು ಮೆಚ್ಚಿನ ಶೈಲಿಯಾಗಿದ್ದ ಭಾಮಿನಿ ಷಟ್ಪದಿಯಲ್ಲಿ ಬರೆದರೆ ಹೇಗೆ ಕಾಣುತ್ತದೆ ಎಂಬ ಕುತೂಹಲವೇ ಈ ಅಣಕುವಾಡಿಗೆ ಕಾರಣ. ರತ್ನರ ಪುಸ್ತಕಕ್ಕೆ ಅವರ ಮಿತ್ರ ಶಿವರಾಮ ಕಾರಂತರು ಚಿತ್ರಗಳನ್ನು ರಚಿಸಿದ್ದರು. ಆ ಚಿತ್ರವೊಂದನ್ನು ಇಲ್ಲಿ ಉದ್ಧರಿಸಿರುವೆ. ]

**ಕುಡಿದು ದಣಿಯೆನು ಹುಳಿಯ ಹೆಂಡವ**
**ಹಾಡಿ ದಣಿಯೆನು ಕವನ ಸಂಚಯ**
**ಮಡದಿ ಜೊತೆಗಿರೆ ಸಗ್ಗ ಸುಖವೆನಗಿಲ್ಲೆ ದೊರೆತಂತೆ**
**ದುಡಿದು ರತ್ನನು ಪಾನದಂಗಡಿ**
**ಗಡಿಯ ದಾಟುತ ಪಾನಪಾತ್ರೆಯ**
**ಹಿಡಿದು ಕುಡಿಯಲು ಹರಿದು ಬಂದುದು ಕಾವ್ಯಧಾರೆಯದು.**



ಇಳೆಗೆ ಬಂದರೆ ದೇವದೇವನು
ಸುಳಿದು ಪಾನದ ಕಟ್ಟೆ ಬಳಿಯಲಿ
ಉಳಿದ ಭಕ್ತರ ಬಿಟ್ಟು ರತ್ನನ ಸನಿಹ ಬಂದಿರಲು
ಹೊಳೆವ ಕಣ್ಣಿನ ಕರುಣ ದೃಷ್ಟಿಯ
ಜ್ವಲಿಸಿ ನೋಡುತ ಭಕ್ತ ರತ್ನನ
ನಿಲಿಸಿ ಸಾರಿದ ತನ್ನ ಆಜ್ಞೆಯ ಮುದದಿ ಭಗವಂತ

ಸಲ್ಲ ಸಲ್ಲದು ನಿನ್ನ ಗಾನವು
ಇಲ್ಲಿ ಕುಳಿತಿರುವಂತೆ ಈಗಳೆ
ಎಲ್ಲ ಕನ್ನಡ ಹಾಡುವಿಕೆಯನು ನಿಲ್ಲಿಸುವುದೆಂದ
ಬೆಲ್ಲದಂತಹ ಹಾಡುಗಾರಿಕೆ
ನಿಲ್ಲಿಸದೆ ಬಲು ಕೋಪದಿಂದಲೆ
ಕಲ್ಲನೆಸೆಯಲು ಖತನ ಮಾಡಲು ಸಿದ್ಧನಾ ರತ್ನ

ಉರಿವ ಬೆಂಕಿಯ ತೆರನ ಬಾಗಿಲ
ನರಕ ಯಾತ್ರೆಯು ಬಂದುದಾದರೆ
ಇರಿದ ನಾಲಿಗೆ, ಹೊಲಿದ ಬಾಯದು ಪ್ರಾಪ್ತಿಯಾಗಿರಲು
ಸಿರಿಯ ಕನ್ನಡ ಹಾಡುವಿಕೆಯನು
ಸರಿ ಸರಿ ನಾ ಮೂಗಿನಿಂದಲೆ
ಪರಿ ಪರಿಯಲಿ ಹಾಡ ಬಯಸುವೆ ನನ್ನ ನೀನರಿಯೆ ■

---



# ಕಸಕಸವೆಂದು

ಮೂಲ ಕೃತಿ : ಕನಕದಾಸರು

ಅಣಕವಾಡು : **ಬೇಲೂರು**

[ ಕನಕದಾಸರ ಕೃತಿ 'ಕುಲಕುಲವೆಂದು' ಯಾರಿಗೆ ತಿಳಿದಿಲ್ಲ. ಈ ಕೃತಿಯನ್ನು ಪ್ರಸ್ತುತ ಸ್ವಚ್ಛ ಅಭಿಯಾನ ಅಂದೋಳನಕ್ಕೆ ಅಳವಡಿಸಿ ಬೇಲೂರರು ಈ ಅಣಕವಾಡನ್ನು ರಚಿಸಿದ್ದಾರೆ. ]

**ಕಸ ಕಸ ಕಸವೆಂದು ಕೊಸಕಾಡದಿರಿ**
**ಈ ಕಸದ ಮಹಿಮೆಯನೇನಾದರು ಬಲ್ಲಿರಾ ಬಲ್ಲಿರಾ**
**ಕಸ ಕಸ ಕಸವೆಂದು ಕೊಸಕಾಡದಿರಿ**

**ಊರಿನ ಹಾದಿಗಳೆಲ್ಲ, ಕಸದಾ ಗುಂಡಿಗಳಾಗಿ**
**ರೋಗ ರುಜಿನಗಳ ತವರೂರಾಗಿ**
**ಕಸವಿಲ್ಲದ ನೆಲೆಯಂತೂ ಕಾಣೋದೇ ಅಪರೂಪ**
**ಕಸವೇ ನುಂಗಣ್ಣರ ನಾಕ ಕಂಡ್ಯ ಮನುಜಾ**

**ಕಸವೇ ಎಲ್ಲ ತಿನ್ನಪ್ಪಗಳಿಗೂ ಬೇಕಲ್ಲವೇ**
**ಕಸದಿಂದ ಮಹಲು ಕಟ್ಟಿದವರನೇನಾದರೂ ಬಲ್ಲಿರಾ**
**ಕಸದಾ ಗೊಪುರದೀ ಕಂಡಿಹರು ಧನಕನಕ**
**ಹಣವು ಅವರಿಗೆ ವಾಸನೆ ಮಾತ್ರ ನಮಗೋ ಭವಿಕಾ**

**ಕಸವೇ ಉಸಿರಾಗಿ, ಕಸವೇ ಬದುಕಾಗಿ**
**ಕಸದಿಂದಲೇ ಜೇಬು ತುಂಬುವುದೇ ನಿಜವಾಗಿ**
**ಕಸದಾ ಟೆಂಡರ್‌ಗೆ ಹೊಡೆದಾಡಿ ಬಡಿದಾಡಿ**
**ಲಾರಿ ಲಾರಿಯಲಿ ಕಮೀಷನ್ ಗಳಿಸುವರೋ ಮಾನವಾ**

**ಕಸ ಕಸ ಕಸವೆಂದು ಕೊಸಕಾಡದಿರಿ**
**ಈ ಕಸದ ಮಹಿಮೆಯನೇನಾದರು ಬಲ್ಲಿರಾ ಬಲ್ಲಿರಾ**
**ಕಸ ಕಸ ಕಸವೆಂದು ಕೊಸಕಾಡದಿರಿ**



■

# ಅವತಾರ ಪುರುಷನ ಅವಸ್ಥಾ – ಶತಕ

(ಗೋವಿನ ಕ್ಷಮೆ ಬೇಡಿ ಅಣಕು ಕವನ : **ವಿ.ಕೆ.ಶ್ರೀನಿವಾಸನ್ (ಬುಳ್ಳ)**

[1943ರ ನವೆಂಬರ್ ತಿಂಗಳ ಕೊರವಂಜಿ ಸಂಚಿಕೆಯಲ್ಲಿ ಬೆಳಕುಕಂಡಿದ್ದ ಆ ಅಣಕುವಾಡಿನ ಲೇಖಕರು 'ಬುಳ್ಳ' ಎಂಬ ಕಾವ್ಯನಾಮದಡಿ ಖ್ಯಾತರಾಗಿದ್ದ ಶ್ರೀ ಶ್ರೀನಿವಾಸನ್ ಅವರು. ಇವರು ರಚಿಸಿದ್ದ "ಬುಳ್ಳನ ಮಹಾ ಬುರುಡೆಗಳು" ಎಂಬ ಸಂಕಲನ ಆಗಿನ ದಿನಗಳಲ್ಲಿ ಬಹು ಜನಪ್ರಿಯವಾಗಿತ್ತು. ಈ ಕವನಕ್ಕೆ ಚಿತ್ರಗಳನ್ನು ಹೊಂದಿಸಿರುವವರು **ಆರ್.ಕೆ.ಲಕ್ಷ್ಮಣ್** ]

**ಜನನ:**
ಧರಣಿ ಮಂಡಲ ಮಧ್ಯದೊಳಗೆ
ಮೆರೆಯುತಿಹ ಕರ್ಣಾಟ ದೇಶದಿ
ಇರುವವರ ಮಾದರಿಯ ಗ್ರಾಮದಿ
ಭರದಿ ಜನಿಸಿದ ಕಂದನು.

ಜನಿಸಿದಾಕ್ಷಣ ದೇವದುಂದುಭಿ
ಘನನಿನಾದವು ಮೊಳಗುತಿರಲು
ಜನ ಸಮೂಹವು ಬಂದು ನೋಡಿ
ಮನದಿ ತಳೆಯಿತು ಹರುಷವ



**ಶೈಶವ :**
ಮೊಳೆವ ಮಾವಿನ ಮೊಳಕೆಯಂದದಿ
ಎಳೆಯ ಗೋವಿನ ತರುವಿನಂದದಿ
ಕಳೆಯ ದಿನಗಳ ಹಸುಳೆ ಬೇಗನೆ
ಬೆಳೆದು ಹರುಷದಿ ನಲಿಯಿತು.

ಸಿಡಿದು ರೋಷದಿ ಹಸಿವು ತಡೆಯದೆ
ಘುಡುಘುಡಿಸಿ ಗೋಳಿಟ್ಟು ಕಿರಿಚುತ
ಬಡಿದು ಪರಚುತ ತಾಯಪ್ರಾಣವ
ಹಿಂಡಿ ಹಿಗ್ಗಿತು ಕಂದನು.

**ಬಾಲ್ಯ:**
ಪಶುಪತಿಯ ಪರಿಪೂರ್ಣ ದಯೆಯಿಂ
ಶೈಶವಾವಸ್ಥೆಯನು ಕಳೆಯಿತು
ಹಸಿವು, ತೃಷೆ, ಕಪಿಚೇಷ್ಟೆ ಕುಹಕದಿ
ಹಸುಳೆ ಬಾಲ್ಯವ ತಳೆದನು.

ಉದಯ ಕಾಲದೊಳೆದ್ದು ಬಾಲನು
ಮುದದಿ ಬೆಣ್ಣೆಯ ಕದ್ದು ತಿನ್ನುತ
ಬುದ್ದಿವಂತಿಕೆ ಸುಳಿವೆ ಇಲ್ಲದೆ
ಪೆದ್ದನಾದ ಕುಮಾರನು.

**ಕೌಮಾರ :**

ಹಲಗೆ ಬಳಪವ ಹಿಡಿಯಲಿಲ್ಲ
ಶಾಲೆ ಬಳಿಯಲಿ ಸುಳಿಯಲಿಲ್ಲ
ಪೋಲಿ ಅಲೆಯುತ ಕಾಲ ಕಳೆಯುತ
ಬಾಲಲೀಲೆಗಳಾಡಿದ.

ಚಿಣ್ಣಿದಾಂಡಿನ ಬುಗುರಿಯಾಟದಿ
ಕಣ್ಣನರಳಿಸಿ ಕೇಕೆಹಾಕುತ
ಸಣ್ಣ ಹುಡುಗರ ಹಿಡಿದುಬಡಿವನು
ಮಣ್ಣನೆರಚುತ ಕಣ್ಣಿಗೆ.

ಕಳೆದು ಯೀಪರಿ ಬಾಲ್ಯವನು ತಾ
ತಳೆದ ಹರೆಯದ ಕುರುಹ ಮೆಲ್ಲನೆ
ಎಳೆಯ ಮೀಸೆಯು ಚಿಗುರು ದಾಡಿಯು
ಬೆಳೆದು ಮೆರೆದನು ತರುಣನು.



**ತಾರುಣ್ಯ:**

ಜುಲ್ಪಿ ಜುಟ್ಟನು ಬಾಚಿ ಬಿಗಿದು
ಷಿಲ್ಪಿ ಹೊಡೆಯುತ ಹುಬ್ಬ ಕುಣಿಸುತ
ಸ್ವಲ್ಪವಾದರು ಹೆದರಿ ಬೆದರದೆ
ಅಲ್ಪತನದಿಂ ದಲೆದನು.

ಧರಗೆ ತಾನವತಾರ ಪುರುಷನು
ಹರಿಹರಬ್ರಹ್ಮಾದಿ ದೇವರು
ಸುರಪತಿಯು ತನಗೆಣೆಯೇ ? ಮಿಕ್ಕಾ
ನರರ ಮಾತೇನೆನ್ನುತ.

ಹಾದಿ ಬೀದಿಯೊಳಲೆದು ಬಂದು
ನದಿಯ ದಡವನು ಸೇರಿನಿಂದು
ಮಿಂದು ಬರುತಿಹ ನಾಡ ಹೆಂಗಳ
ಚೆಂದವನು ತಾ ಮೆಚ್ಚಿದ.

ದಿನಗಳೀಪರಿ ಕಳೆಯುತಿರಲು
ಮನಕೆ ಮೋಹದ ಅಮಲು ಏರಲು
ಶುನಕನಂದದಿ ದಾರಿ ಕಾದನು
ಕನ್ನೆಯೋರ್ವಳ ಕೆಣಕಲು.

**ಯೌವನ :**

ಮುಂದುಮುಂದಕೆ ನಡೆದು ಬರುತಿಹ
ಮಂದ ಗಮನೆಯ ಹಿಂದೆ ಮೆಲ್ಲನೆ
ಬಂದು ಬಳಸಿ ಅಡ್ಡಗಟ್ಟಿ
ನಿಂದನಾ ಕಲಿರಾಯನು.

'ಹಸಿದವೇಳೆಗೆ ಸಿಕ್ಕಿದೊಡವೆಯ
'ಕಸಿದುಕೊಳ್ಳದೆ ಬಿಡಲು ನೀನು
'ನುಸುಳಿಹೋದರೆ ಮತ್ತೆ ಬರುವೆಯ?
'ಹಸುಳೆ ತಾನಲ್ಲೆ'ಂದನು



'ದಿಟವ ನಾಡಿದೆ ದುರುಳರಾಯನೆ
'ಹಟವ ಬಿಡದೊಡೆ ತಲೆಯನೊಡೆಯುವೆ
'ಸಟೆಯ ಮಾತಲ್ಲೆ'ಂದು ರೋಷದಿ
ಕಟುಕ ಕನ್ನೆಯು ಚೀರಿದಳ್

'ಅಂಗೀನೋಡೀ ವಸ್ತ್ರನೋಡೀ
'ಉಂಗುರವ, ಕೈಕಡಗ ನೋಡು
'ಅಂಗನೆಯೆ ನಾನಾರುಬಲ್ಲೆಯ?
'ಕಣ್ಗೆಕಾಣುವ ಕಾಮನು!

'ತಿಂಡಿ ಬೇಕೆ? ತೀರ್ಥ ಬೇಕೆ?
'ದುಂಡು ಮಲ್ಲಿಗೆ ಚೆಂಡು ಬೇಕೆ?
'ಹಂಡೆ ತುಂಬ ಹೊನ್ನ ಕೊಡುವೆನು
'ಪುಂಡ ತಾನಲ್ಲೆ'ಂದನು.

'ಭಂಡನೀನು, ಪುಂಡ ನೀನು,
'ಹೆಂಡ ಕುಡಿದಿಹ ಮಂಗನೀನು,
'ಮಂಡೆಯೊಡೆಯುವೆ' ನೆಂದುಘರ್ಜಿಸಿ
ಕೆಂಡ ಕರೆಯುತ 'ಚಂಡಿಯು'

'ಮೇಲೆ ಬೀಳುವೆ ನಿನ್ನನೀಗಲೆ
'ಬೀಳಹೊಯ್ವೆನು ನಿನ್ನ ಹೊಟ್ಟೆಯ
'ಸೀಳಿ ಬಿಸುಡುವೆ'ನೆನುತ ಕೋಪದಿ
ಖೂಳರಕ್ಕಸಿ ಕೂಗುತ.

ಬಡಿವೆನೆನುತಾರ್ಭಟಿಸಿ ರೋಷದಿ
ದಡದಡನೆ ಮುನ್ನುಗ್ಗಿ ಬರುತಿಹ
ಹುಡುಗಿ ನಡಗೆಯು ರಭಸಕಂಜಿ
ಓಡಿಹೋದ 'ಕಿರಾತನು'.



ನಾಡಗೌಡನ ಬಳಿಗೆ ಬಂದು
ಹುಡುಗಿ ನಡೆದುದನ್ನೆಲ್ಲ ಪೇಳ್ವಳು
ಸಿಡಿದು ರೋಷದಿ ಗೌಡನೆಂದನು
'ಹಿಡಿದು ಕಡಿವೆವು ಖೂಳನ!'

'ಊರಮಾರಿಯ ಕೋಣನಂದದಿ
'ಕೇರಿ ಕೇರಿಯೊಳೆಲ್ಲ ಅಲೆಯುವ
'ಪೋರ, ಪೋಕರಿ, ಪುಂಡನೀಗಲೆ
ನೀರನೂಕುವೆ'ವೆಂದನು.

ಆರು ಮೈಲಿಗಳೋಡಿ ನಿಂತನು
ಪೋರವೀರನು ಬಳಲಿ ಬೆದರುತ
ಊರಸೇರುವ ಬಯಕೆ ತೊರೆದು
ದಾರಿ ನಡೆದನು ದೂರಕೆ.

'ಹಂಡೆ ಹೊನ್ನನು ಕೊಡುವೆ'ನೆಂದರು
'ಮಂಡೆಯೊಡೆಯುವೆನೆಂಬ ಹೆಂಗಳ
'ಪುಂಡತನವನ್ನು ಕಂಡು ಸಹಿಸೆನು
'ಗಂಡುಗಲಿ' ತಾನೆನ್ನುತ.


'ನಾಡ ಹೆಂಗಳ ಗೊಡವೆಗಿಂತಲು
'ಕಾಡು ಮೃಗಗಳ ಒಲವೆಲೇಸು
'ಮೂಢ ಜನರಿಹ ಹಾಳು ಹಳ್ಳಿಯ
'ದೂಡಿ ನಡೆವುದೆ ಚಂದವು!'

'ಹಳ್ಳಿಕಾಡಿನ ಒರಟು ಮೂಢರು,
'ಒಳ್ಳೆಮಾತಿನ ಸುಳಿವ ತಿಳಿಯರು
'ಕೊಳ್ಳಿಯಿಡುವರು ಬಳಿಗೆ ಕರೆದರೆ
'ಹಳ್ಳಿವಾಸವು ಸಲ್ಲದು'

ಎಂದು ನಡೆದನು ಮುಂದುಮುಂದಕೆ
ಹಿಂದೆ ಹಿಂದಡಿಗಡಿಗೆ ನೋಡುತ
ಪಂದೆಯಂದದಿ ಬೆಚ್ಚಿಬೆದರುತ
ಹಂದಿ ಹೋಲುವ 'ಕಾಮನು'.

**ವಾನಪ್ರಸ್ಥ :**
ಯುವಕ ನೀಪರಿ ಹೊರಟು ತನ್ನಯ
ಯೌವನಾವಸ್ಥೆಯನು ಕಳೆಯಲು
ಭವ್ಯವಾಗಿಹ ನಗರವೊಂದನು
ದಿವ್ಯತೇಜದಿ ಹೊಕ್ಕನು

ಗಾಯಗೊಂಡಿಹ ಕರಡಿಯಂದದಿ
ಲಾಯ ತಪ್ಪಿದ ಕುದುರೆಯಂದದಿ
ಪ್ರಾಯದಮಲಲಿ ಕಣ್ಗೆ ಕಾಣದೆ
ಮಾಯವಾದನು 'ಮಾರನು'.



■

● ದಂನಆ

- ✓ ರಾಹುಲ್ ಗಾಂಧಿ ಅವರನ್ನು ಫಾರ್ಮರ್ ಫ್ಯೂಚರ್ ಪ್ರೈಮ್ ಮಿನಿಸ್ಟರ್ ಎಂದು ಈಗಲೇ ಹೇಳಬಹುದೆ?
- ✓ ಮದುವೆ ಎಂಬುದು ಒಂದು ಸುಂದರ ಅರಣ್ಯ. ಅಲ್ಲಿ ಬಲಿಷ್ಠ ಸಿಂಹಗಳನ್ನು ಸುಂದರ ಜಿಂಕೆಗಳು ಕೊಲ್ಲುತ್ತವೆ.
- ✓ ಹಿರಾಯಿಸಂ ಈಸ್ ದಿ ಓನ್ಲಿ ವೆ ಟು ಬಿಕಂ ಫೇಮಸ್ ಇಫ್ ಯು ಹ್ಯಾವ್ ನೊ ಟ್ಯಾಲೆಂಟ್.
- ✓ ತತ್ವಜ್ಞಾನಿಯೊಬ್ಬ ನನಗೆ ಉತ್ತರಿಸತೊಡಗಿದರೆ ನನ್ನ ಪ್ರಶ್ನೆಯೇ ನನಗೆ ಅರ್ಥವಾಗುವುದಿಲ್ಲ.
- ✓ ಜ್ಞಾನ ಎಂಬುದು ಒಳಪೋಷಾಕು. ಅದು ಅಗತ್ಯ ನಿಜ ಆದರೆ ಅದನ್ನು ಪ್ರದರ್ಶಿಸಬೇಕಿಲ್ಲ.
- ✓ ನಾನು ಆಲ್ಕೊಹಾಲ್ ಕುಡಿದರೆ ನನ್ನನ್ನು ಆಲ್ಕೊಹಾಲಿಕ್ ಎಂದು ಜರೆಯುತ್ತಾರೆ. ಆದರೆ ಫಾಂಟಾ ಕುಡಿದರೆ ಫೆಂಟಾಸ್ಟಿಕ್ ಎಂದು ಕರೆಯುವುದಿಲ್ಲ.
- ✓ ನನಗೆ ನಿದ್ದೆ ಮಾಡಲು ಬರುತ್ತದೆ. ಕಣ್ಣು ಮುಚ್ಚಿಕೊಂಡೇ ಮಾಡಬಲ್ಲೆ.
- ✓ ಪೀಪಲ್ ಡೋಂಟ್ ಕೇರ್ ಫಾರ್ ಯು ವೆನ್ ಯು ಆರ್ ಅಲೋನ್. ದೆ ಜಸ್ಟ ಕೇರ್ ಫಾರ್ ಯು ವೆನ್ ದೆ ಆರ್ ಅಲೋನ್.
- ✓ ಜನರನ್ನು ನಂಬದಿರಲು ಎರಡು ಕಾರಣಗಳಿವೆ. ಒಂದು, ಅವರು ನಮಗೆ ಗೊತ್ತಿಲ್ಲದಿರುವುದು. ಎರಡು, ಅವರು ನಮಗೆ ಗೊತ್ತಿರುವುದು.
- ✓ ಬಿಟ್ವೀನ್ ಎ ಬ್ಯಾಡ್ ಕುಕ್ ಅಂಡ್ ಎ ಪಾಯಿಸನರ್ ದೇರ್ ಈಸ್ ಜಸ್ಟ್ ಎ ಡಿಫರೆನ್ಸ್ ಆಫ್ ಇಂಟೆನ್ಷನ್.
- ✓ ಲಕ್ಷ್ಮಣ್‌ಶಿವರಾಮಕೃಷ್ಣ ನಾಸ್ತಿಕನಾದರೆ...?
- ✓ ಸ್ಕೂಲ್ಸ್ ಆರ್ ದಿ ಆಪೋಸಿಟ್ ಆಫ್ ಸೋಷಿಯಲ್ ಡಿಸ್ಟನ್ಸಿಂಗ್.
- ✓ ಮಕ್ಕಳಾಟಿಕೆಗಳನ್ನು ತಯಾರಿಸುವುದು ಮಕ್ಕಳ ಆಟವಲ್ಲ.
- ✓ ಸಂಪ್ರದಾಯಗಳ ಹಿಂದಿನ ಮರ್ಮವನ್ನು ಅರಿಯುವುದು ಅದನ್ನು ಪಾಲಿಸುವದಕ್ಕಿಂತ ದೊಡ್ಡದು.
- ✓ ಹಣಕ್ಕೆ ಲಕ್ಷ್ಮಿ, ವಿದ್ಯೆಗೆ ಸರಸ್ವತಿ ಪ್ರೀತಿಗೆ?

■

# ಆಯ್ದ ಹನಿಗವನಗಳು

[ಶ್ರೀಯುತ ಅ.ರಾ.ಮಿತ್ರರ ಛಂದೋಮಿತ್ರ ಪುಸ್ತಕದಿಂದ ಆಯ್ದದ್ದು]

**●ಅ.ರಾ.ಮಿತ್ರ**

ಪ್ರಾಸದ ಪೀಠದ ಮೇಲೆ
ಮಾತಿನ ಬಾಲೆಯ ಬ್ಯಾಲೆ
ಅತಿಯಾದರೆ ಮಾತಿನ ಲೀಲೆ
ಉರುಳಿ ಬಿದ್ದಾಳು ಲೋಲೆ

***

ಆಲೂಗೆಡ್ಡೆ ಬೋಂಡಾಂತಂದ್ರೆ
ಪ್ರಾಣ ನಂ ಪಾಪಂಗೆ
ಎಷ್ಟೇ ಕೊಟ್ರೂ ತಿನ್ತಾ ಇರ್ತಾನ್
ಹಂಡೇಹಾಗ್ ಬಾಯ್‌ಬಿಟ್ಕೊಂಡೇ

***

## ತಾಯಿ–ಮಗ

" ಏಕಮ್ಮ ಈತಂ ಕೊರಚಾಡುಕಿರ್ಪಂ ?"
" ಏಕೆನ್ನೆ ಕಳ್ಳಂ ಇವ ಶುದ್ಧ ಸುಳ್ಳಂ
ಲಾಕಪ್ಪಿಗೆಂದೇ ಎಳೆದೊಯ್ಯುತಿರ್ಪರ್ "
" ಹಾಗೇನು?– ಕಾನ್ವೆಂಟಿಗೆ ಎಂದುಕೊಂಡೆಂ "

***

## " ತುಳಿತ "

ಸಿಟಿಯ ಬಸ್ಸಲಿ ನಿಂತು ಪಯಣಿಸೆ
ಬೂಟುಗಾಲ ಮಹಾನುಭಾವನು
ಮೆಟ್ಟಿ ಕಾಲನು ಕ್ಷಮಿಸಿರೆಂದು ನೋಡಲಿಲ್ಲೆನುತ
ಕೆಟ್ಟೆನ್ನೆ ನೋಡದೆಲೆ ಈತನು
ಇಷ್ಟು ತುಳಿದನು ನೋಡಿಬಿಟ್ಟರೆ
ಎಷ್ಟನರ್ಥವೊ ಎನುತ ಕಾಲನು ಹಿಂದಕೆಳಕೊಂಡೆ

***

## ಭಾಷಣಕಾರ

ಕೊರೆವ ಯಂತ್ರಕೆ ನೆಲದ ತಳದಲಿ
ಹರಿಯುವೆಣ್ಣೆಯು ಐದು ನಿಮಿಷಕೆ
ದೊರೆಯದಿದ್ದರೆ ಕೊರೆವುದನ್ನೇ ನಿಲಿಸಿ ನಡೆಯುವರು
ನೆರೆದ ಸಭಿಕರ ಕಿವಿಯ ತಳದಲಿ
ಕೊರೆವ ಭಾಷಣಕಾರ ಜನರಿಗೆ
ಬರದು ಏಕೋ ಯಂತ್ರಬುದ್ಧಿಯು ಏನು ಮಾಡುವುದು.

***

# ಹನಿಗವನಗಳು

## ಪಲುಕಿದಳು ಅಪರಂಜಿ

**•ಸಹನಾ ಪ್ರಸಾದ್**

ಅಯ್ಯೋ ತಾಳಲಾರೆ ಕೊರೋನಾ ಕಾಟವ
ರಕ್ಷಿಸು ಪ್ರಭುವೇ ಎಂದು ಮೊರೆಯುಟ್ಟೆ
ಇರು, ಇನ್ನೂ ನೋಡಿಲ್ಲ ನೀ ಬದುಕಿನಾಟವ
ಇಕೋ ಕಾಣಿಲ್ಲಿ , ಮಾದಕ ದ್ರವ್ಯಗಳ ಸುದ್ದಿ ಬಿಟ್ಟೆ!!
ಕಷ್ಟಪಡುತಿದ್ದಾರೆ ಜನ ಇಲ್ಲಿ
ಮಾಧ್ಯಮದವರಿಗೆ ಗಿಟ್ಟಬೇಕು ಟೀಆರ್ಪೀ
ಅವರಿಗಿಲ್ಲ ಚಿಂತೆ ಯಾರು ಸತ್ತರಿಲ್ಲಿ
ಸಿಗಬೇಕು ಅವರ ಚ್ಯಾನಲ್ಗೆ ಜಾಸ್ತಿ ಸೀಟಿ !!

## ನೆನಪು

**•ಕೆ. ಎಸ್. ಶ್ರೀಶೈಲನ್**

ಬಾನಲ್ಲಿ ಕವಿದಾಗಲು ಕತ್ತಲು
ಬರುವುದು ನಿನ್ನದೇ ನೆನಪು
ಕರಿಮೋಡ ಒಟ್ಟಾರೆ ಕೂಡಿದಾಗಲು.
ಬರುವುದು ನಿನ್ನದೇ ನೆನಪು
ಕುಂಭದ್ರೋಣ ಸುರಿದಾಗಲೂ
ನೊಸಲ ಧಾರೆಯಲಿ ತೊಯ್ದಾಗಲೂ
ನೆತ್ತಿಯ ಮೇಲೆ ನೇಸರು ನಿಂತಾಗಲೂ
ಬರುವುದು ನಿನ್ನದೇ ನೆನಪು
ನೀ ಹೊತ್ತು ಹೋದ ಕೊಡೆಯ
ಎಲ್ಲಿ ಇಟ್ಟಿರುವೆ ಬಲ್ಲೆಯ
ಇಂದೇ ನನಗೆ ತರುವೆಯಾ ?

ಅಣಕು ಗದ್ಯ ಸ್ಪರ್ಧೆ

# ವಿನಾಶದ ಪರಂಪರೆಗೆ ವಿವೇಕದ ಪ್ರತಿಕ್ರಿಯೆ

●ರಘುನಾಥ ಚ.ಹ.

ಫೋಟೊ–ಕಲಾಕೃತಿ ನೋಡಿ ಕಥೆ–ಕವಿತೆ ಬರೆಯುವುದು; ಅಪೂರ್ಣಕಥೆಯನ್ನು ಪೂರ್ಣಗೊಳಿಸುವುದು; ನಿರ್ದಿಷ್ಟ ವಿಷಯ ಒಳಗೊಂಡು ಕಥೆ–ಕವಿತೆ ರಚಿಸುವುದು, ಈ ಬಗೆಯ ಹಲವು ಪ್ರಯೋಗಗಳನ್ನು ಕನ್ನಡದ ಪತ್ರಿಕೆಗಳು ನಿರಂತರವಾಗಿ ಮಾಡುತ್ತಲೇ ಬಂದಿವೆ. ಈ ಪ್ರಯೋಗ ಪರಂಪರೆಯ ಭಾಗವಾಗಿ 'ಅಪರಂಜಿ' ಕಥೆಯೊಂದನ್ನು ನೀಡಿ, ಅದನ್ನು ಮರು ನಿರೂಪಿಸುವ ಪ್ರಯೋಗಕ್ಕೆ ಮುಂದಾಗಿದೆ. ಇಲ್ಲಿ ಕಥನವಷ್ಟೇ ರೂಪಾಂತರ ಹೊಂದಿಲ್ಲ; ಕಥೆಗಾರರೂ ವೇಷಧಾರಿಗಳಾಗಿದ್ದಾರೆ.

ಕಥೆ ಸರಳವಾದುದು: ಗೋದಾವರಿತೀರದ ಮರವೊಂದರಲ್ಲಿಎಲೆಗೊಂದು ಗಿಳಿ. ಮಳೆಯ ಒಂದು ದಿನ ಆಶ್ರಯಕ್ಕಾಗಿ ಮರದಡಿಗೆ ಬಂದ ಕಪಿಗಳ ಹಿಂಡಿಗೆ ಗಿಳಿಗಳ ಬುದ್ಧಿವಾದ: 'ಕೈ ಕಾಲು ಗಟ್ಟಿಯಿರುವ ನೀವು ಮನೆ ಕಟ್ಟಿಕೊಂಡು ನೆಮ್ಮದಿಯಿಂದ ಇರಬಾರದೆ?' ಪರಿಣಾಮ: ಎರಡು ಮಿಲಿಯನ್ ವರ್ಷಗಳ ನಂತರ ಮರಗಳ ಜಾಗದಲ್ಲಿ ಮಹಲುಗಳು.

ಈ ಪುಟ್ಟಕಥೆ ಮನುಷ್ಯ ವಿಕಾಸದ ಚರಿತ್ರೆಯನ್ನೂ, ಆ ವಿಕಾಸದ ಭಾಗವಾಗಿರುವ ಪರಿಸರ ನಾಶದದುರಂತವನ್ನೂ ಒಟ್ಟಿಗೆ ಧ್ವನಿಸುತ್ತದೆ. ಈ ಕಥೆಯನ್ನೇ ಹಲವು ಲೇಖಕರು ಬೇರೆ ಬೇರೆ ರೀತಿಗಳಲ್ಲಿ ಕಟ್ಟುವ ಮೂಲಕ, ವಿಕಾಸ ಮತ್ತು ವಿನಾಶದ ಸಾಧ್ಯತೆಗಳನ್ನು ಬೇರೆ ಬೇರೆ ರೂಪಗಳಲ್ಲಿ ಚಿತ್ರಿಸಿದ್ದಾರೆ. ಈ ಪ್ರಯೋಗವನ್ನು, 'ವಿನಾಶದ ಪರಂಪರೆಗೆ ವಿವೇಕದ ಪ್ರತಿಕ್ರಿಯೆ' ಎನ್ನಬಹುದು. ವ್ಯಕ್ತಿ ಹಾಗೂ ಸಮಾಜದ ಕೆಡುಕುಗಳಿಗೆ ಕನ್ನಡಿ ಆಗುವುದು ಎಲ್ಲ ಕಲೆಗಳ ಉದ್ದೇಶ. ಈ ನೆಲೆಗಟ್ಟಿನಲ್ಲಿ, ಗೋದಾವರಿ ತೀರದ ಕಥೆಯ ಮರು ನಿರೂಪಣೆಯ ವಿವಿಧ ಮಾದರಿಗಳು ಸಮಾಜದ ಓರೆಕೋರೆಗಳಿಗೆ ಬೇರೆ ಬೇರೆ ಕೋನಗಳಲ್ಲಿ ಹಿಡಿದಿರುವ ಕನ್ನಡಿಗಳೇ ಆಗಿವೆ.

ಈ ಪ್ರಯೋಗದ ಮತ್ತೊಂದು ವಿಶೇಷ, ಕಥೆಯನ್ನು ಮರು ನಿರೂಪಿಸಿರುವ ಲೇಖಕರು ಬಳಸಿರುವ ವಿಶಿಷ್ಟ ಕಥನಶೈಲಿ. ಇಲ್ಲಿನ ಲೇಖಕರು ತಮ್ಮ ಶೈಲಿಯನ್ನು ಬಿಟ್ಟು, ಕನ್ನಡದ ಪ್ರಸಿದ್ಧ ಬರಹಗಾರರ ಶೈಲಿಗಳನ್ನು ಅನುಸರಿಸಿದ್ದಾರೆ; ಡಿ.ವಿ.ಜಿ., ಕುವೆಂಪು, ದೇವನೂರು ಮಹಾದೇವ, ಎಸ್.ಎಲ್. ಭೈರಪ್ಪ, ಟಿ.ಪಿ. ಕೈಲಾಸಂ, ಎಚ್ಚೆಸ್ಕೆ, ಬೇಂದ್ರೆ, ಬೀಚಿಯವರನ್ನು ಬಹು ಸಂಭ್ರಮದಿಂದ ಆವಾಹಿಸಿಕೊಂಡಿದ್ದಾರೆ. ಹಿರಿಯ ಲೇಖಕರನ್ನು ಒಳಗೊಳ್ಳುವ ಈ ಕ್ರಿಯೆ ಎಷ್ಟು ಸೊಗಸಾಗಿದೆಯೆಂದರೆ, ಅನುಸರಣೆಯ ವಿವರಗಳನ್ನು ಮರೆತು ಓದಿದರೆ ಇವು ಆಯಾ ಲೇಖಕರ ಅಸಲಿ ರಚನೆಗಳೇ ಎನ್ನುವಷ್ಟು ಜೀವಂತವಾಗಿವೆ. ಕನ್ನಡದ ಹಲವು ರೂಪಗಳನ್ನು ಪ್ರತಿನಿಧಿಸುವ 'ಅಪರಂಜಿಕನ್ನಡ'ದ ಈ ಬರಹಗಳು ಮೇಲ್ನೋಟಕ್ಕೆ ಒಂದು ತುಂಟ ಪ್ರಯೋಗದ ರೂಪದಲ್ಲಿ, ಓದುಗರ ತುಟಿಗಳಲ್ಲಿ ನಗೆಯರಳಿಸಬಹುದು. ಆದರೆ, ಈ ಅನುಸರಣೆಯನ್ನು ಮತ್ತೊಂದು ರೂಪದಲ್ಲೂ ನೋಡಲಿಕ್ಕೆ ಸಾಧ್ಯವಿದೆ. ವಿನಾಶದ ಪರಂಪರೆಗೆ ವಿವೇಕದ ಪ್ರತಿಕ್ರಿಯೆಯ ರೂಪದಲ್ಲಿ ಈ ಬರಹಗಳನ್ನು ನೋಡುವುದಾದರೆ, ಇಲ್ಲಿನ ಅಭಿವ್ಯಕ್ತಿ ಈ ಹೊತ್ತಿನ ಅಥವಾ 'ಅಪರಂಜಿ' ಬಳಗದ ಬರಹಗಾರರ

ಪ್ರತಿಕ್ರಿಯೆಯಷ್ಟೇ ಆಗಿರದೆ; ಕನ್ನಡ ಸಾಂಸ್ಕೃತಿಕ ಪರಂಪರೆಯನ್ನೇ ತನ್ನ ಜೊತೆಗಿರಿಸಿಕೊಳ್ಳುವ ಹಂಬಲವಾಗಿದೆ. ಈ ಒಳಗೊಳ್ಳುವಿಕೆ ಕಾರಣದಿಂದಾಗಿ, 'ಅಣಕುಗದ್ಯರಚನೆ'ಯ ಪ್ರಯೋಗ ತನ್ನ ಚೌಕಟ್ಟನ್ನು ಮೀರಿ, ವಿಸ್ತಾರ ಹಾಗೂ ಘನತೆಯನ್ನು ಪಡೆದುಕೊಂಡಿದೆ. ಆಧುನಿಕ ಕನ್ನಡದ ವಿವೇಕವೇ ಒಟ್ಟಾಗಿ ಪರಿಸರ ನಾಶದಕಥೆಯೊಂದನ್ನು ಸಮೂಹಗಾನದ ರೂಪದಲ್ಲಿ ನಿರೂಪಿಸುವ ಮೂಲಕ, ಪರಿಸರ ಕಾಳಜಿಯ ಅಗತ್ಯವನ್ನು ಹೇಳುವಂತಿದೆ.

'ಅಪರಂಜಿ' ಬಳಗದ ಈ ಚೇತೋಹಾರಿ ಪ್ರಯೋಗ ಅಭಿನಂದನೆಗೆ ಅರ್ಹ. ಮುಂದಿನ ಇಂಥ ಪ್ರಯೋಗಗಳಲ್ಲಿ ಹೊಸಗನ್ನಡದ ಗಣ್ಯರ ಜೊತೆಗೆ, ಪೂರ್ವಸೂರಿಗಳಾದ ಪಂಪ, ಕುಮಾರವ್ಯಾಸ, ವಚನಕಾರ, ಕೀರ್ತನಕಾರರೂ 'ಅಪರಂಜಿ ಬಳಗ' ಸೇರುವಂತಾಗಲಿ.

## ಅಣಕು ಗದ್ಯ ಸ್ಪರ್ಧೆಯ ಫಲಶ್ರುತಿ

ಆಗಸ್ಟ್ ಸಂಚಿಕೆಯಲ್ಲಿ ಬಾಲಬೋಧೆಯ ಕಥೆಯೊಂದನ್ನು ಕೊಟ್ಟು, ಅದನ್ನು ನಮ್ಮ ನಾಡಿನ ಖ್ಯಾತ ಸಾಹಿತಿಗಳ ಶೈಲಿಯಲ್ಲಿ ಅಣಕು ಬರಹಗಳನ್ನು ರಚಿಸಿರೆಂದು ಆಹ್ವಾನ ನೀಡಿದ್ದೆವು. ನಮ್ಮ ಆಹ್ವಾನವನ್ನು ಮನ್ನಿಸಿ ಬಹು ಉತ್ಸಾಹದಿಂದ ನಮ್ಮ ಬಳಗದ ಬರಹಗಾರರು ಈ ಸ್ಪರ್ಧೆಗೆ ಸ್ಪಂದಿಸಿದರು. ಮನರಂಜನೆಗೆಂದು ಮಾಡಿದ ಪ್ರಯತ್ನ ಹೇಗೆ ಅತ್ಯುತ್ತಮ ಸಾಹಿತ್ಯ ಸೃಷ್ಟಿಗೆ ಕಾರಣವಾಗಬಲ್ಲುದೆಂಬುದಕ್ಕೆ ಈ ಲೇಖನಗಳೇ ನಿದರ್ಶನ.

ಶ್ರೀಮತಿ ಚಿತ್ರಾ ರಾಮಚಂದ್ರನ್ ಅವರು ಡಿ.ವಿ.ಜಿ. ಅವರ ಮಂಕುತಿಮ್ಮನ ಕಗ್ಗದ ಶೈಲಿಯನ್ನು ಆರಿಸಿಕೊಂಡಿದ್ದರೆ, ಮೈಸೂರಿನ ನಾಗರತ್ನ ಅವರು ಬೇಂದ್ರೆಯವರ ಶೈಲಿಯನ್ನು ಅನುಕರಿಸಿದ್ದಾರೆ. ಗೌತಮ ಅವರ "ಮರ ಹೆತ್ತ ನಗರ" ಲೇಖನ, ದೇವನೂರು ಮಹದೇವರ ಕುಸುಮಬಾಲೆಯನ್ನು ನೆನಪಿಗೆ ತರುತ್ತದೆ. ಈ ಸ್ಪರ್ಧೆಯ ಕಲ್ಪನೆಯನ್ನು ನಮಗೆ ನೀಡಿದ ಆನಂದರು ತಮ್ಮ ಮೆಚ್ಚಿನ ಎಚ್ಚೆಸ್ಕೆ ಅವರ ಸಂಕ್ಷಿಪ್ತ ಶೈಲಿಯನ್ನು ಚೊಕ್ಕದಾಗಿ ಮೂಡಿಸಿದ್ದಾರೆ. ಅಣಕು ಕವಿಯೆಂದೇ ಹೆಸರಾದ ರಾಮನಾಥರು ಬಳಸಿರುವ ಬೀಚಿಯವರ ಬ್ರೀಜೀ ಧಾಟಿ, ತಿಂಮನ ತಲೆಹರಟೆಯನ್ನು ನೆನಪಿಸುತ್ತದೆ. ಪಾಪಾ ಪಾಂಡು ಖ್ಯಾತಿ ನರಸಿಂಹ ಮೂರ್ತಿಯವರು ಟಿ ಪಿ ಕೈಲಾಸಂ ಅವರ ಇಂಗ್ಲನ್ನಡವನ್ನು ಭಟ್ಟಿ ಇಳಿಸಿದ್ದರೆ, ನಮ್ಮ ಉಪಸಂಪಾದಕರಾದ ಬೇಲೂರು ರಾಮಮೂರ್ತಿಯವರು ಎಸ್.ಎಲ್.ಭೈರಪ್ಪನವರ ಶೈಲಿಯನ್ನು ಬಹು ಸೊಗಸಾಗಿ ಮೂಡಿಸಿದ್ದಾರೆ. ನನ್ನ ಮೆಚ್ಚಿನ ಕವಿ ಕುವೆಂಪು ಅವರಿಗೂ ಈ ಸ್ಪರ್ಧೆಯಲ್ಲಿ ಒಂದು ಸ್ಥಾನವಿರಲಿ ಎಂದು ನಾನು ಶುಕೋಪದೇಶ ರಚಿಸಿರುವೆ.

ಒಟ್ಟಿನಲ್ಲಿ ಓದುಗರಿಗಾಗಿ ಅಣಕು ಗದ್ಯದ ರಸದೌತಣ ನಿಮ್ಮ ಮುಂದೆ ಬಾಳೇ ಎಲೆಯ ಮೇಲೆ ಉಣಬಡಿಸಲಾಗಿದೆ. ಓದಿ, ಖುಷಿಪಡಿ.

**ಶಿವಕುಮಾರ್**

## ಅಣಕು ಗದ್ಯ ರಚನೆಗೆ ಕೊಟ್ಟ ಮಾದರಿ ಕಥೆ

ಗೋದಾವರಿ ನದೀ ತೀರದಲ್ಲಿ ಒಂದು ಆಲದಮರ ಇತ್ತು. ಆ ಮರದಲ್ಲಿ ಗಿಳಿಗಳು ಗೂಡನ್ನು ಕಟ್ಟಿಕೊಂಡು ತಮ್ಮ ಮರಿಗಳೊಡನೆ ಬಹಳ ದಿನಗಳಿಂದ ವಾಸಮಾಡಿಕೊಂಡಿದ್ದವು. ಹೀಗಿರುವಾಗ ಕಾರ್ತೀಕಮಾಸದಲ್ಲಿ ಒಂದು ದಿನ ಬಹಳ ಮಳೆಯು ಬಂದಿತು. ಆಗ ಆ ನದೀ ತೀರದಲ್ಲಿರುವ ಎಲ್ಲ ಕಪಿಗಳೂ ಶೀತವನ್ನು ತಡೆಯಲಾರದೇ ಆ ಮರದ ಬುಡದಲ್ಲಿ ಬಂದವು. ಆಗ ಆ ಮರದಲ್ಲಿನ ಗೂಡಿನಲ್ಲಿರುವ ಮರಿಗಳು ಆ ಕಪಿಗಳನ್ನು ನೋಡಿ ಹೀಗೆಂದವು. "ದೇವರು ನಿಮಗೆ ಕೈಕಾಲುಗಳನ್ನು ಕೊಟ್ಟಿದ್ದಾನೆ. ನೀವು ಮನೆಗಳನ್ನು ಕಟ್ಟಿಕೊಂಡು ಸುಖವಾಗಿ ಇರಬಹುದು. ಏಕೆ ಈ ಮರವನ್ನು ಆಶ್ರಯಿಸಿಕೊಂಡು ನೆನೆಯುತ್ತಿದ್ದೀರಾ? ನಮ್ಮ ಮಾತು ಕೇಳಿ. ಮಳೆ ನಿಂತ ಮೇಲೆ ಮನೆ ಕಟ್ಟಿಕೊಂಡು ಸುಖವಾಗಿರಿ" ಎಂದು ಉಪದೇಶಿದವು.

ಎರಡು ಮಿಲಿಯನ್ ವರ್ಷಗಳ ನಂತರ ಆ ಕಪಿಗಳು ನದೀ ತೀರದ ಮರಗಳನ್ನೆಲ್ಲಾ ನಾಶಮಾಡಿ, ಗಿಣಿ ಮತ್ತು ಇತರ ಪಕ್ಷಿಗಳಿಗೆ ನೆಲೆಯಿಲ್ಲದಂತೆ ಮಾಡಿ ಗೇಟೆಡ್ ಕಮ್ಯೂನಿಟಿ ಕಟ್ಟಿಕೊಂಡು ಸುಖವಾಗಿದ್ದವು.

ನೀತಿ:

ಮೂರ್ಖರಿಗೆ ಮಾಡುವ ಉಪದೇಶ ಅನರ್ಥಕ್ಕೆ ಕಾರಣ.

# ಮರ ಹೆತ್ತ ನಗರ

(ದೇವನೂರು ಮಹಾದೇವರ ಕ್ಷಮೆ ಕೋರಿ)



ದೇವನೂರು ಮಹಾದೇವರ ಶೈಲಿಯಲ್ಲಿ
ಅಣಕು ಬರಹ ರಚನೆ : **ಗೌತಮ**

---

ಆಕಾಸದಾಗಿನ ಕೋಟಿ ಕೋಟಿ ನಕ್ಸತ್ರಗಳೋಪಾದೀಲಿ
ಬೂಮಿ ಮೇಲಿನ ಈ ರುಕ್ಸಗಳು.
ಆ ಕೋಟಿ ಕೋಟಿ ರುಕ್ಸಗಳಾಗೆ ನಮ್ದೂ ಒಂದು ಮರ. ಆಲ್ದ ಮರ.
ಅದೂ ಗೋದಾರೀ ತೀರದಲ್ಲೇ.
ಸಅಸ್ರಾರು ರೆಂಬೆ ಕೊಂಬೆಗಳ ಚಾಚಿಕೊಂಡು
ಅತ್ತೆಕರೆಗೆ ಅರಡಿಕೊಂಡಿದ್ದ ಬಾರೀ ಗಾತುರದ ಆಲ್ದ ಮರ. ಆ ರುಕ್ಸದಲ್ಲೇ
ಸಾವಿರಾರು ಅಕ್ಕಿಗಳ ನೂರಾರು ಗೂಡುಗಳು. ಅಸಿರು ಬಣ್ಣದ ಗಿಣಿಗಳಾದ
ನಾವ್ಗೋಳೆಲ್ಲ ಆ ಗೂಡುಗಳಲ್ಲೇ ಉಳಉಪ್ಟೆ ತಿನ್ಕಂಡು ಸುಕವಾಗಿ ಬದುಕ್ತಾ ಇದ್ದೋ.
ಇಂತಿರಲಾಗಿ, ಒಂಜಿನ ಕಿಷ್ಣ ಪರುಮಾತುಮ ನರಕಾಸುರನ್ನ ಅತ್ಯೆ ಮಾಡಿದ ತಿಂಗಳಲ್ಲಿ
ಜೊರೋ ಅಂತ ಮಳ ದಾರಾಕಾರ್ವಾಗಿ ಸುರಿದದ್ದೇ ಸುರಿದದ್ದು ಸುರಿದದ್ದೇ ಸುರಿದದ್ದು.
ಆ ಸೊಳಿ ಗಾಳಿಗೆ ನಾವೆಲ್ಲ ನೆಂದು ತೊಪ್ಪೆಯಾಗಿ ನಡುಗೋದೊ.
ನದೀ ತೀರದಲ್ಲೇ ಇದ್ದಂತ ವಾನರ ಕೋತಿಗಳೆಲ್ಲ
ಆ ಬಯಂಕರ ಮಳೇಗೆ ಎದರ್ಕೊಂಡು ಆ ಸೊಳೀನ ತಡಕಳ್ಳಾರ್ದೇ
ನೆಂದು ಕೆಸರುಗದ್ದೆಯಾಗಿದ್ದ ಬೂಮಿ ಮ್ಯಾಗೆ ಪಿತಪಿತ ಅಂತ ಎಜ್ಜೆ ಆಕ್ತಾ
ಓಡೋಡಿ ನಮ್ಮ ರುಕ್ಸದ ನೆಳ್ಳಿಗೇ ಬಂದೋ. ಅಂಗೆ ಬಂದ ಕೋತಿಗಳು
ಒಂದಲ್ಲ ಎಳ್ಡಲ್ಲ ಮೂರಲ್ಲ ನಾಕಲ್ಲ ಅತ್ತಲ್ಲ ಇಪ್ಪತ್ತಲ್ಲ ಒಂದು ಸಾವಿರ ಇರಬೈದೇನೋ.
ಒದ್ದೆ ಅತ್ತೀನ ಮೈಗೆ ಮೆತ್ತಿಕಂಡಂಗಿದ್ದ ಕೋತಿಗಳೆಲ್ಲ ರುಕ್ಸದ ಕೆಳಗೆ ರೆಷ್ಟು ತಗಂತಾ
ಥರಥರ ನಡುಗ್ತಾ 'ಈ ಆಳು ಮಳ ಎಷ್ಟೊತ್ತಿಗೆ ನಿಂತತೋ' ಅಂತ ಚಿಂತುಸ್ತಾ
ನಿಂತಿದ್ದೋ.
ಮಳೆರಾಯನಿಗೆ ಅವರ ಕಸ್ಟ ಅರಿವಿಗೆ ಬಂತೋ ಅತ್ವಾ ಸುರ್ದೂಸುರ್ದೂ
ಸುಸ್ತಾಗೋದ್ನೋ
ಬೂಮಿ ಮ್ಯಾಗೆ ಮಳೆ ಉಯ್ಯೋದನ್ನ ನಿಲ್ಲಿಸ್ಬುಟ್ಟು ಕಂಬಳಿ ವೊದ್ಕೊಂಡು ಮನೀಕಂಬಿಟ್ಟ.

********

ನಮ್ಮ ವಂಸದಲ್ಲೇ ಗಿಣಿರಾಮನಂತ ಬುದ್ದಿಮಂತನ್ನ ನಾವು ಈ ನೇತ್ರಗಳಿಂದ ನೋಡಿಲ್ಲ.
ಅಂತ ಬುದ್ದಿಮಂತ ಅವ್ನು. ಆ ಚಂಜೆ ಸೂರಪ್ಪ ಪಸ್ಚುಮದಲ್ಲಿ ಮುಣುಗೋ ಟೇಮಲ್ಲಿ
ನಮ್ಮ ಗಿಣಿರಾಮ ತನ್ನ ರೆಕ್ಕೆಗಳನ್ನ ಪಟಪಟ ಬಡೀತಾ ಚಿಲಿಪಿಲಿಗುಡ್ತಿದ್ದ
ನಮ್ಮೆಲ್ಲರಿಗೂನೂ
'ಯಾರೂ ಸಬುದ ಮಾಡಬ್ಯಾಡದು' ಅಂತ ಅಪ್ಣೆ ಮಾಡ್ದ. ಎಲ್ರೂ ಗಪ್ಚಿಪ್ಪಾದೊ.
ನಾವೆಲ್ರೂ ಸೈಲೆಂಟ್ ಆದುದನ್ನು ಕಂಡು ಕುಸಿಯಿಂದ

ನಿಂತಿದ್ದಲ್ಲೇ ಎಡಗಾಲನ್ನ ಎತ್ತಿ ಮತ್ತೆ ಅಲ್ಲೇ ಮಡಗಿ, ಬಲಗಾಲನ್ನೆತ್ತಿ ಮತ್ತೆ ಅಲ್ಲೇ ಮಡಗಿ ವಾನರ ಕೋತಿಗಳ ಕಡೆ ದುಷ್ಟಿ ಆಯಿಸ್ತಾ ಒಂದು ಕಿತ ಕ್ಯಾಕರಿಸಿ ಗಂಟಲು ಅರಿಯೋಂಗೆ 'ಸದ್ದು' ಅಂತ ಕಿರುಚಿದ. ಕಿಚಿಪಿಚ ಕಿಚಪಿಚ ಅಂತಿದ್ದ ಕೋತಿಗಳೆಲ್ಲಾ
ಮೂತಿ ಮ್ಯಾಗೆ ಕೈಗಳನ್ನು ಮಡಿಕ್ಕೊಂಡು ತಲವ ಮ್ಯಾಕೆತ್ತಿ ನಮ್ಮ ಕಡೆ ನೋಡಿದೋ.
ಆ ಆಗ ಪಿಂಡ್ರಾಪು ಸೈಲೆನ್ಸು ಬದ್ರವಾಗಿ ತಳವೂರಿ ಕುಂತುಕೊಂತು.
ಗಿಣಿರಾಮ 'ಅಡ್ಮೈ ಕೋತಿಗಳಾ' ಅಂತಿದ್ದಂಗೆ ಒಂದು
ಮುದಿ ವಾನರ ಕೋತಿ ಮುಂದಕ ಬಂದು ತನ್ನೇಡೂ ಕಾಲುಗಳಲ್ಲಿ ನಿಂತು,
ತನ್ನೇಡೂ ಕೈಗಳನ್ನ ಎದೆ ಮ್ಯಾಕೆ ಮಡಿಕ್ಕತು.
'ಆ ಪರುಮಾತುಮ ನಿಮ್ಗಳಿಗೆಲ್ಲಾ ಕೈನಂತ ಕೈಗಳನ್ನ ಕಾಲ್ನಂತ ಕಾಲುಗಳನ್ನ ಕೊಟ್ಟವ್ನೆ.
ಅವು ಸಾಲ್ದು ಅಂತ ನಿಮ್ಮ ಸರೀಲಕ್ಕೆ ಒಂದು ಬಾಲಾನೂ ಸಿಕ್ಸವ್ನೆ.
ಈ ರುಕ್ಸವೇ ಯಾಕೆ ನಿಮಗೆ ಆಸರೆಯಾಗಬಕು? ನನ್ನ ಮಾತ ಕ್ಯೋಳಿ.
ಮಳ ನಿಂತ ಮ್ಯಾಗೆ ನೀವೆಲ್ಲ ಒಂದೊಂದು ಮನೆ ಕಟ್ಟಿಕೊಂಡು
ಆಯಾಗಿ ಬದುಕಿ' ಅಂದ. ಎಲ್ಲಾ ಕೋತಿಗಳೂ
ಒಂದರ ಮಕಾನ ಒಂದು ನೋಡಕೊಂತಾ 'ಆಗಲಿ' ಅನ್ನೋಂಗೆ ತಲೆ ಆಡಿಸಿದೋ.

*********


ಈ ಈ ಘಟನೆ ನಡೆದು ಇಪ್ಪತ್ತು ಲಕ್ಷ ವರ್ಷಗಳಾದವು. ಈ ದೀರ್ಘಾವಧಿಯಲ್ಲಿ ಆ ಕಪಿಗಳೂ ದೈತ್ಯರಂತೆ ಬೆಳೆದವು.
ನಾಲಕ್ಕು ಕಾಲುಗಳಲ್ಲಿ ನಡೀತಿದ್ದವು ಎರಡೇ ಕಾಲುಗಳಲ್ಲಿ ನಡೆಯತೊಡಗಿದವು.
ಬಾಲವನ್ನು ಕಳೆದುಕೊಂಡವು.
ಸೂಟುಬೂಟುಗಳನ್ನ ತೊಟ್ಟುಕೊಂಡು ಮೆರೆದಾಡಿದವು. ಪರಮಾತ್ಮ ಕೊಟ್ಟಿದ್ದ ಕಯ್ಯಿ ಕಾಲುಗಳು ಮತ್ತು ತಮ್ಮದೇ
ಆದ ಸ್ವಂತ ದುಷ್ಟ ಬುದ್ಧಿಯಿಂದ ಪಕ್ಷಿಗಳು ವಾಸಿಸುತ್ತಿದ್ದ ಮರಗಳಿಗೆಲ್ಲಾ ಕೊಡಲಿಯ ನಾಲಿಗೆಯನ್ನು ತೋರಿಸಿ
ಕಾಡುಗಳನ್ನೆಲ್ಲಾ ಕಾಂಕ್ರಿಟ್ ನಾಡುಗಳನ್ನಾಗಿ ಕನ್ವರ್ಟ್ ಮಾಡಿ, ಕೋಟ್ಯಾಂತರ ಮನೆಗಳನ್ನು ಕಟ್ಟಿಕೊಂಡು
ಸುಖವಾಗಿ ಜೀವನ ನಡೆಸುತ್ತಿದ್ದಾರೆ. ಗಿಣಿಯಷ್ಟೇ ಅಲ್ಲ ಬೇರೆ ಯಾವ ಪಕ್ಷಿಗೂ ನೆಲೆಯಿಲ್ಲದಂತೆ ಮಾಡಿ ಗೇಟೆಡ್
ಕಮ್ಯುನಿಟಿಗಳನ್ನು ನಿರ್ಮಿಸಿಕೊಂಡು ದೇ ಆರ್ ಲಿವಿಂಗ್ ಹ್ಯಾಪ್ಪಿಲೀ.

*********

**ನೀತಿ:**

**ಮತಿಯೀನರಿಗೆ ಬುದ್ವಾದ**
**ಯೋಳೋದೂ ಒಂದೇ**

**ತಮ್ಮೆದೆ ಮ್ಯಾಗೆ ತಾವೇ**
**ಕೊಳ್ಳಿ ಮಡಿಕ್ಕಳಾದೂ ಒಂದೇ**



■

# ಶುಕೋಪದೇಶ



ಕುವೆಂಪುರವರ ಶೈಲಿಯಲ್ಲಿ
ಅಣಕು ಬರಹ ರಚನೆ : **ಶಿವು**

---

ಧನುರ್ವಿದ್ಯಾ ಚತುರ ಗುಡಾಕೇಶನಿಗೆ ದ್ವಾಪರ ಯುಗದಲ್ಲಿ ಗೀತೆಯನ್ನು ಬೋಧಿಸಿದ ಶ್ರೀ ಕೃಷ್ಣ ಪರಮಾತ್ಮನ ಪರಮ ಭಕ್ತ ಶ್ರೀ ಚೈತನ್ಯ ಮಹಾಪ್ರಭು ಮಿಂದು ಹರ್ಷಿಸಿದ, ಪಾವನ ಗಂಗೆಯ ತಂಗಿಯೆಂದೇ ಹೇಳಬಹುದಾದ ಗೋದಾವರಿ ನದಿ, ಆ ಕಾನನದ ಸೆರಗಿನಲ್ಲಿ ನಳನಳಿಸುತ್ತ ಹರಿಯುತ್ತಿರುವ ದೃಶ್ಯ ನೋಡಲು ಎರಡು ಕಣ್ಣುಗಳು ಸಾಲವು. ವಾಸ್ತವದಲ್ಲಿ ಅಂದು ಆ ಕಾರ್ತೀಕಮಾಸದ ಸಂಜೆ ನೂರಾರು ಕಣ್ಣುಗಳು ಆ ಸುಂದರ ರಮಣೀಯತೆಯನ್ನು ಈಕ್ಷಿಸುತ್ತಿದ್ದರೂ ಆ ಕಣ್ಣುಗಳು ಮಾನವ ಕಣ್ಣುಗಳಾಗಿರಲಿಲ್ಲ. ಪವನಸುತ ಮಾರುತಿಯ ವಂಶಜರೂ ಮಾನವನ ಪೂರ್ವಜರೂ ಆದ ಕಪಿವರ್ಯರು ಆ ದಂಡೆಯಲ್ಲಿ ಕುಳಿತು ಸುತ್ತಲಿನ ಸೊಬಗನ್ನು ಅನುಭವಿಸುವ ಸಾಮರ್ಥ್ಯವಿಲ್ಲದೇ ಕೇವಲ ಉದರ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಅವರು ಆಸೀನರಾಗಿದ್ದ ಜಾಗೆಗೆ ಸ್ವಲ್ಪವೇ ದೂರದಲ್ಲಿ ಒಂದು ಕಾಡು. ಸೂರ್ಯಾಸ್ತದ ಸಂಜೆ ಬಿಸಿಲು ದೀರ್ಘ ತರುಚ್ಛಾಯೆಗಳ ಮಧ್ಯೆ ತೂರಿಬಂದು ಕುರುಚುಲು ಗಿಡಗಳ ಮೇಲೆಯೂ ಪಿಣಿಲಾಗಿ ಹೆಣೆದುಕೊಂಡಿದ್ದ ಬಳ್ಳಿ ಹೊದರುಗಳ ಮೇಲೆಯೂ ಶುಷ್ಕಪರ್ಣಾವೃತವಾಗಿದ್ದ ನೆಲದ ಮೇಲೂ ಬಿದ್ದಿತ್ತು. ಇತರ ವನ್ಯ ಪಕ್ಷಿಗಳೂ ತಮ್ಮ ತಮ್ಮ ಧ್ವನಿ ಪ್ರದರ್ಶನದಲ್ಲಿ ತೊಡಗಿದ್ದವು. ಒಂದು ಕಡೆ ಕಾಜಾಣವು ತನ್ನ ಸ್ವರ್ಗೀಯ ಸುಮಧುರವಾದ ಗಾನಧಾರೆಯಿಂದ ಅರಣ್ಯ ಪರ್ವತಗಳನ್ನು ಸಂಗೀತ ಸ್ರೋತದಲ್ಲಿ ತೇಲಿಸುತ್ತಿತ್ತು.

ಆ ಕಾಡಿನಲ್ಲೊಂದು ಹೆಮ್ಮರ. ಆ ಮರದ ಮೇಲೆ ಗಿಳಿವಿಂಡೊಂದು ಸಂಸಾರ ಹೂಡಿತ್ತು. ಸಂಸಾರವೆಂದಮೇಲೆ ಅಸಮಾಧಾನ ಕಟ್ಟಿಟ್ಟ ಬುತ್ತಿ ಎಂಬುದು ಸರ್ವವಿದಿತ. ಆ ಗಿಳಿ ಸಂಸಾರವೇನೂ ಇದಕ್ಕೆ ಹೊರತಾಗಿರಲಿಲ್ಲ. ಚಿಕ್ಕಪ್ಪ ಗಿಳಿ ಎಲ್ಲರ ಮಾತುಕತೆಗಳಲ್ಲೂ ಮೂಗುತೂರಿಸುತ್ತಾ ಬೇಡದ ಸಲಹೆ ಬುದ್ಧಿವಾದವನ್ನು ಬಹು ಧಾರಾಳವಾಗಿ ವಿತರಿಸುತ್ತಾ ಇದ್ದದ್ದು ಮನೆಯವರಿಗೆಲ್ಲಾ ಒಂದು ನುಂಗಲಾರದ ತುತ್ತಾಗಿತ್ತು. ಅಪ್ಪ ಗಿಳಿಗೆ ತನ್ನ ತಮ್ಮನನ್ನು ನಿಯಂತ್ರಿಸಲು ಇದ್ದ ಮುಖ್ಯ ಅಡಚಣೆಯೆಂದರೆ ಅವನ ಬಗ್ಗೆ ಇದ್ದ ಮಮಕಾರ. ಆ ಸಂಜೆ ಯಾವುದೋ ಕಾರಣಕ್ಕೆ ಚಿಕ್ಕಪ್ಪ ಗಿಳಿ ಮೌನವ್ರತವನ್ನು ಕೈಗೊಂಡಿದ್ದರಿಂದ ಸಂಸಾರದಲ್ಲಿ ಕ್ಷಣಿಕವಾಗಿಯಾದರೂ ಶಾಂತಿ ನೆಲಸಿತ್ತು.

ಸೂರ್ಯದೇವ ತನ್ನ ಪಡುವಲ ಕುಟೀರಕ್ಕೆ ನಿರ್ಗಮಿಸುತ್ತಿದ್ದಂತೆಯೇ ಗಾಢ ನಿಶೀಥ ಕಾನನವನ್ನು ಆವರಿಸಿತು. ಒಮ್ಮೆಲೇ ಧೋ ಧೋ ಎಂದು ವರುಣದೇವ ಜಲವರ್ಷವನ್ನು ಧಾರೆಯೆರೆದ. ಆ ಬಿರುಮಳೆಯ ರಭಸಕ್ಕೆ, ಅದರ ಕುಳಿರಿಗೆ ಕಂಗಾಲಾಗಿ ನಮ್ಮ ವಾನರಮಿತ್ರರು ಓಡೋಡಿ ಬಂದು ಆ ಹೆಮ್ಮರದ ಬುಡದಲ್ಲಿ ಆಶ್ರಯಪಡೆದರು. ಅವರ ಕಿಚಿಪಿಚಿ, ಗಾಬರಿಯ ಸಂಭಾಷಣೆ ಚಿಕ್ಕಪ್ಪ ಗಿಳಿಯ ಮೌನವನ್ನು ಮುರಿಯುವುದರಲ್ಲಿ ಯಶಸ್ವಿಯಾಯಿತು. ಚಿಕ್ಕಪ್ಪ ಗಿಳಿ ಕುತೂಹಲದಿಂದ ಗೂಡಿನಿಂದ ಹೊರಕ್ಕೆ ಇಣುಕಿ ಚಳಿಯಿಂದ ನಡುಗುತ್ತಿದ್ದ ವಾನರವೃಂದವನ್ನು ಈಕ್ಷಿಸಿದ. ಅವರ ಪರಿಸ್ಥಿತಿ ನೋಡಿ ಅವನ ಹೃದಯ ಕರಗಿತು. ಆ ಮಂಗಗಳನ್ನುದ್ದೇಶಿಸಿ, " ಅಪ್ಪಗಳಿರಾ, ಭಗವಂತನು ನಮ್ಮಗಳಿಗಿಲ್ಲದ ಅತ್ಯಂತ ಉಪಯುಕ್ತವಾದ ಪಾಣಿಪಾದಗಳನ್ನು ನಿಮಗೆ ಕರುಣಿಸಿದ್ದಾನೆ. ಏಕೆ ವೃಥಾ ಕಷ್ಟಕೋಟಲೆಗಳನ್ನು ಅನುಭವಿಸುವಿರಿ. ಒಂದು ಭವ್ಯ. ಗೃಹವನ್ನು ಅಥವಾ ಕಡೆಯ ಪಕ್ಷ ಒಂದು ಕುಟೀರವನ್ನು ನಿರ್ಮಿಸಿಕೊಂಡು ಅದರಲ್ಲಿ ನಿಮ್ಮ ಜೀವಯಾತ್ರೆಯನ್ನು ನಡೆಸಲಾಗದೇ" ಎನ್ನುವಷ್ಟರಲ್ಲಿ ಅಪ್ಪ ಗಿಳಿ ಹಿಂದಿನಿಂದ ಬಂದು ಅವನ ಬಾಯನ್ನು ತನ್ನ ರೆಕ್ಕೆಯಿಂದ ಮುಚ್ಚಿ ಚಿಕ್ಕಪ್ಪನನ್ನು ಹಿಂದಕ್ಕೆಳೆದ. ಆದರೇನು, ವಿಧಿಲಿಖಿತ. ಆಗುವ ಅನಾಹುತ ಆಗಿಯೇ ಹೋಗಿತ್ತು.

ಶುಕೋಪದೇಶ ಆ ವಾನರ ಅಂತಃಕರಣಗಳಲ್ಲಿ ಕಾದ ಸೀಸದಂತೆ ಒಳಹೊಕ್ಕು ಮುಂದೆ ಕಲಿಯುಗದಲ್ಲಿ ಆ ವಾನರರ ವಂಶಜರು " ಕುಲಕ್ಕೆ ಮೃತ್ಯು ಕೊಡಲಿ ಕಾವು "ಎಂಬ ಗಾದೆಯಂತೆ ಆ ಗೋದಾವರಿ ತಟದ ಕಾಡನ್ನೆಲ್ಲಾ ನಾಶಮಾಡಿ ಪಕ್ಷಿಸಂಕುಲವನ್ನು ನಿರ್ನಾಮಗೊಳಿಸಿ, ಭವ್ಯಸೌಧಗಳನ್ನು ನಿರ್ಮಿಸಿಕೊಂಡು ಅದೇ ಸುಖವೆಂಬ ಮಿಥ್ಯಾ ಆನಂದದಲ್ಲಿ ಮುಳುಗಿದವು.



■

# ಮಂಕಿಲ್ಲದ ತಿಮ್ಮನ ಕಗ್ಗ



ಡಿ.ವಿ.ಜಿ.ಯವರ ಶೈಲಿಯಲ್ಲಿ
ಅಣಕು ಬರಹ ರಚನೆ : **ಚಿತ್ರಾ ರಾಮಚಂದ್ರನ್**

---

**ಪರಬೊಮ್ಮನಿಗೆ ನಮನ**

ಶ್ರೀ ವಿಷ್ಣು ವಿಶ್ವಾದಿಮೂಲ ಮಾಯಾಲೋಲ
ದೇವ ಸರ್ವೇಶ ಪರಬೊಮ್ಮನ ನಮಿಸಿ ,
ಪೂಜ್ಯ ಶ್ರೀ ಡಿ.ವಿ.ಜಿ.ಯವರ ಕ್ಷಮೆ ಯಾಚಿಸಿ ,
ಅಪರಂಜಿಗೆ ಸಲ್ಲಿಸುತ್ತಿರುವ 'ಮಂಕಿಲ್ಲದ ತಿಮ್ಮನ ಕಗ್ಗ'.

**ಪ್ರಕೃತಿ ರಸ ಸೌಂದರ್ಯ**

ತೆರೆಯುರುಳಿ ಹೊರಳುವ ಗೋದಾವರಿ ತೀರದಿ ,
ವಟವೃಕ್ಷದ ಶಾಖೆಯೊಳು ಗೂಡು ಕಟ್ಟಿ ,
ಸುಖಿಸಿದ್ದ ಶುಕಪರಿವಾರದ ಗಾಥೆಯ
ಸಹನೆಯಿಂದಾಲಿಸು ಮಂಕುತಿಮ್ಮ .

**ಪ್ರಕೃತಿ ವಿಕೋಪ**

ಕಾರ್ತಿಕ ಮಾಸದ ಭೋರ್ಗರೆವ ಮಳೆಯೋಳ್
ತೊಯ್ದು ನಡುನಡುಗಿದ ತಿಮ್ಮ ಸೈನ್ಯವದು ,
ಆಶ್ರಯವನರಸಿ ವಟವೃಕ್ಷದ ಬಳಿ ಬಂದು
ಅಡಗಿ ಕುಳಿತಿತು ಬುಡದಿ – ಮಂಕುತಿಮ್ಮ

**ಶುಕ ಪ್ರಶ್ನೆ**

'ಮಂದಾಕ್ಷಿ ನಮಗಿಹುದು, ಅರೆಗಣ್ಣು ನಮದೆಂದು ,
ಕೊರಕೊರಗಿ ಕುಳಿತಲ್ಲಿ ಗೂಡಿನಾಶ್ರಯ ದಕ್ಕುವುದೆ ಎಮಗೆ ?
ತೋಳ್ಗಳೆರಡು ಇರ್ದು, ಕರಕುಶಲಕಲೆ ಕಲಿತು
ನೆಲೆ ರಚಿಸದಿಹುದೇಮ್ ಮಂಕುತಿಮ್ಮ ? '

**ವಿಧಿವಿಧಾನ**

ಕಾಲಚಕ್ರ ತಿರುತಿರುಗಿ ಪರಿಪರಿಯ ರೂಪ ಧರಿಸಿ ,
ಕಡೆಗೊಮ್ಮೆ ನರರೂಪ ತಾಳಿ ಬಂದನಾ ವಾನರ .
ತರಿದೊಗೆದು ವೃದ್ಧ ವಟವೃಕ್ಷವ, ಬಲಿಕೊಟ್ಟು ಶುಕ ಖಗವ ,
ಮನೆಯಮೇಲೆ ಮನೆ ಮಾಡಿ 'ಮಂಕಿಲ್ಲದ ತಿಮ್ಮ ನಾ'ನೆಂದ –
ಮಂಕುತಿಮ್ಮ

**ನೀತಿ**

ಒಳಿತನೆಸಗುವೆನೆಂದು ಮೂರ್ಖರಿಗೆ
ಉಪದೇಶ ನೀಡುವುದೆ ಅನರ್ಥಕ್ಕೆ ಕಾರಣ.
ನಿನ್ನಯ ಜ್ಞಾನ ನಿನಗೇ ದಾರಿ ದೀಪ,
ಹೊಲಿ ನಿನ್ನ ತುಟಿಗಳನು ಮಂಕುತಿಮ್ಮ



■

# ಗಿಣಿ – ಕಪಿ




ಎಚ್ಚೆಸ್ಕೆರವರ ಶೈಲಿಯಲ್ಲಿ
ಅಣಕು ಬರಹ ರಚನೆ : **ಆನಂದ**

---

ಗೋದಾವರಿ. ಜೀವ ನದಿ.
ತೀರದಲ್ಲೊಂದು ಆಲದ ಮರ. ಅದರಲ್ಲಿ ಗಿಳಿಗಳ ವಾಸ.
ಚೊಕ್ಕನೆ ಗೂಡು. ಮರಿಗಳ ಕಲರವ. ಎಲ್ಲವೂ ಚೆನ್ನಿತ್ತು. ಗಿಳಿಗಳು ಮರಿಗಳೊಂದಿಗೆ ಸುಖವಾಗಿದ್ದವು.
ಕಾರ್ತಿಕ ಮಾಸದ ಒಂದು ದಿನ. ಮಳೆಯೋ ಮಳೆ. ಧಾರಾಕಾರ. ಗಡ ಗಡ ಚಳಿ.
ಸುತ್ತಮುತ್ತಲಿದ್ದ ಕಪಿಗಳಿಗೆ ಚಳಿ ತಡೆಯಲಾಗಲಿಲ್ಲ. ಆಲದ ಮರದ ಬುಡಕ್ಕೆ ಬಂದವು.
ಗೂಡಿನಲ್ಲಿದ್ದ  ಗಿಣಿಗಳು ನೋಡಿದವು. ಕಪಿಗಳು ನಡುಗುತ್ತಿವೆ. ಗಿಣಿ ಮರಿಗಳಿಗೆ ಮರುಕ. ಆಶ್ಚರ್ಯ!
ಅರೆ! ನಮ್ಮಂತೆ ಇವುಗಳಿಗೆ ಗೂಡಿನ ಆಶ್ರಯವಿಲ್ಲ! ನಾವೇ ವಾಸಿ. ಬೆಚ್ಚನೆ ಮನೆ. ಕಪಿಗಳಿಗೆ ಕೈ ಕಾಲುಗಳಿವೆ. ಮನೆ ಕಟ್ಟಿಕೊಂಡು ನಮ್ಮಂತೆ ಸುಖವಾಗಿರಬಾರದೆ?
ಗಿಣಿ ಮರಿ ಉಪದೇಶಿಸಿತು: ಏಕೀ ಬವಣೆ? ನೀವೂ ಮನೆಗಳನ್ನು ಕಟ್ಟಿಕೊಳ್ಳಿ. ಸುಖವಾಗಿರಿ. ನೆನೆಯುವುದು ತಪ್ಪುತ್ತೆ.
ಉಪದೇಶ ಕೆಲಸ ಮಾಡಿತು.

ಎರಡು ಮಿಲಿಯನ್ ವರ್ಷಗಳ ನಂತರ...
ಕಪಿಗಳ ಕೈ ಚಳಕ. ಮರಗಳು ನಾಶವಾದವು. ನದಿ ತೀರ ಬೋಳಾಯಿತು. ಗಿಣಿಗಳು ನೆಲೆಯನ್ನು ಕಳೆದುಕೊಂಡವು. ಇತರ ಪಕ್ಷಿಗಳೂ ಪರದಾಡುವಂತಾಯಿತು.
ಕಪಿಗಳ ಗೇಟೆಡ್ ಕಮ್ಯುನಿಟಿ ತಲೆ ಎತ್ತಿತು. ಸುಖವಾಗಿದ್ದವು.

ನೀತಿ: ಮೂರ್ಖರಿಗೆ ಉಪದೇಶ ಅನರ್ಥಕ್ಕೆ ಕಾರಣ.



# ವಾನರ ಪರ್ವ



ಎಸ್.ಎಲ್.ಭೈರಪ್ಪನವರ ಶೈಲಿಯಲ್ಲಿ
ಅಣಕು ಬರಹ ರಚನೆ : **ಬೇಲೂರು**


---

ಒಂದು ಊರು. ಅದು ಇತ್ಲಾಗೆ ಬಯಲು ಸೀಮೆಯೂ ಅಲ್ಲ ಅತ್ಲಾಗೆ ಮಲೆನಾಡೂ ಅಲ್ಲ ಅನ್ನುವಂಥದ್ದು. ಆದರೆ ಅಲ್ಲಿ ಸುತ್ತಮುತ್ತ ಮಳೆ ಮಾತ್ರ ತುಂಬಾ ಬರ್ತಿತ್ತು. ಆಗಿನ ಕಾಲದಲ್ಲಿ ಎಲ್ಲಾ ಊರಿನಲ್ಲೂ ಇರೋಹಾಗೆ ಆ ಊರಲ್ಲೂ ಒಂದು ಕೆರೆ, ಒಂದು ದೇವರ ಗುಡಿ ಇತ್ತು. ವಿಶೇಷ ಏನಪ್ಪಾ ಅಂದ್ರೆ ಯಾವುದೋ ಊರಲ್ಲಿ ಹುಟ್ಟಿ ಇನ್ಯಾವುದೋ ಊರಿಗೆ ಸೇರೋ ಮೊದಲು ಒಂದು ನದಿ ಆ ಊರಿನ ಮುಖಾಂತರ ಹರಿದು ಹೋಗ್ತಿತ್ತು. ಅದು ಆ ಊರಿನ ಜನರಿಗೆ ಬೆಳೆ ಬೆಳೆಯೋಕೆ, ಕುಡಿಯೋಕೆ ಬಹಳಾ ಉಪಯೋಗ ಆಗ್ತಿತ್ತು. ಅದರ ಹೆಸರು ಗೋದಾವರಿ ಅಂತ ನನ್ನ ನೆನಪು. ಆ ನದಿ ದಡದಲ್ಲಿ ಒಂದು ದೊಡ್ಡ ಆಲದ ಮರ. ನಾನು ಅದನ್ನು ನಮ್ಮಜ್ಜನ ಕಾಲದಿಂದ ನೋಡ್ಕೊಂಡು ಬಂದಿದೀನಿ. ಬಹಳಾ ದೊಡ್ಡ ಮರ. ಅದರ ಸುತ್ತಳತೆನೇ ಸುಮಾರು ನೂರು ಅಡಿ ಇರಬೇಕೇನೋಪ್ಪ. ಮರ ಅಂದ್ಮೇಲೆ ಹಕ್ಕಿ, ಪಾರಿವಾಳ, ಗಿಳಿ ಇಂಥವುಕ್ಕೆ ಏನೂ ಕಡಿಮೆ ಇರೂದಿಲ್ಲ. ಆ ಮರದಲ್ಲೂ ಸಾಕಷ್ಟು ಗಿಳಿಗಳು ಗೂಡು ಕಟ್ಕೊಂಡು ಮಕ್ಕಳು ಮರಿ ಮಾಡ್ಕೊಂಡು ನೆಮ್ಮದಿಯಿಂದ ಇದ್ವು.

ಒಂದು ವರ್ಷ ಮಾತ್ರ ಹಿಂದಿನ ವರ್ಷಗಳಿಗಿಂತಾ ಬಹಳಾ ಮಳೆ. ಅದೇನೋ ಹೇಳ್ತಾರಲ್ಲ ಆಕಾಶ ತೂತು ಬಿದ್ದಿದೆಯೋ ಏನೋ ಅಂತ, ಹಾಗೆ. ವಾರಗಟ್ಟೆ ಮಳೆ ಧೋ ಅಂತ ಸುರಿದು ಜನರಿಗೆಲ್ಲ ಸಾಕುಮಾಡಿಬಿಡ್ತು. ಮಳೆ ಬಂದ್ರೆ ಗಿಳಿಗಳು, ಹಕ್ಕಿಗಳು ಪಾಪ ಎಲ್ಲಿ ಹೋಗುತ್ವೆ. ನೆಮ್ಮದಿಯಾಗಿ ಗೂಡಿನಲ್ಲಿ ಇದ್ವು. ಆಗ ಅದೆಲ್ಲಿಂದ ಬಂತೋಪ್ಪ ದೊಡ್ಡ ದೊಡ್ಡ ಕಪಿಗಳ ಹಿಂಡು ಬಂದು ಏಕಾಏಕಿ ಮರ ಹತ್ತಿಬಿಟ್ಟವು. ಕಪಿಗಳು ಹೀಗೆ ಮರ ಹತ್ತಿದ್ದನ್ನು ಗೂಡಿನ ಒಳಗಿಂದಲೇ ನೋಡಿದ ಗಿಳಿಗಳು ಗಾಬರಿ ಮಾಡ್ಕೊಂಡಿದ್ದಂತೂ ನಿಜ. ಅಲ್ಲಾ ಇಷ್ಟು ವರ್ಷ ನಮ್ಮ ಪಾಡಿಗೆ ನಾವು ಇಲ್ಲಿದೀವಿ. ಈಗ ಈ ಕಪಿಗಳು ಬಂದು ನಮ್ಮ ಮನಸ್ಸಿನ ನೆಮ್ಮದಿಯನ್ನು ಹಾಳು ಮಾಡುತ್ವಲ್ಲ ಅಂತ. ಗಿಳಿಗಳ ಗುಂಪಿನಲ್ಲಿ ಒಂದು ಹಿರಿ ಗಿಳಿ ಇತ್ತು. ಬೇರೆ ಗಿಳಿಗಳಿಗಿಂತ ಅದಕ್ಕೆ ಸ್ವಲ್ಪ ಧೈರ್ಯ ಜಾಸ್ತಿ. ಏನು ಶಬ್ದ ಆದ್ರೂ ಮೊದಲು ಹೋಗಿ ನೋಡ್ತಿದ್ದಿದ್ದು ಈ ಹಿರಿ ಗಿಳಿನೇ. ಯಾವಾಗ ಹಿಂಡು ಹಿಂಡು ಕಪಿಗಳು ಮರ ಹತ್ತಿದವೋ ಆಗ ಹಿರೀ ಗಿಳೀನೇ ಗೂಡಿನಿಂದ ಆಚೆಗೆ ಬಂದು

ಕಪಿಗಳ ಗುಂಪಿನಲ್ಲಿದ್ದ ಒಂದು ಗಡವ ಕಪಿಯ ಹತ್ತಿರ ಹೋಗಿ ಏನ್ರಪ್ಪಾ ನಿಮಗೂ ಆಸರೆಗೆ ಈ ಮರಾನೇ ಬೇಕಾಗಿತ್ತಾ. ನಮ್ಮ ಪಾಡಿಗೆ ನಮ್ಮನ್ನು ನೆಮ್ಮದಿಯಾಗಿ ಇರೋಕೆ ಬಿಡಬಾರ್ದಾ. ದೇವರು ನಿಮಗೆ ಬಲಿಷ್ಠವಾದ ಕೈ ಕಾಲುಗಳನ್ನು ಕೊಟ್ಟಿದಾನೆ. ಮಳೆಯಿಂದ ಆಸರೆಗೆ ಅಂತ ಸಣ್ಣದೋ ಪುಟ್ಟದೋ ಒಂದು ಮನೆ ಕಟ್ಕೊಂಡು ನೀವೂ ನೆಮ್ಮದಿಯಾಗಿದ್ದು ನಮ್ಮನ್ನೂ ನೆಮ್ಮದಿಯಾಗಿ ಇರೋಕೆ ಬಿಡಬಾರದಾ ಅಂತ ಕೇಳ್ತು.

ಈ ಘಟನೆ ನಡೆದದ್ದು ನನಗೆ ನೆನಪಿರೋ ಹಾಗೆ ಸುಮಾರು ಎರಡು ಮಿಲಿಯನ್ ವರ್ಷಗಳ ಹಿಂದೆ ಇರಬೇಕು. ಅವತ್ತು  ಗಿಳಿಗಳು ಏನು ಹೇಳಿದ್ವೋ ಹಾಗೆ ಆ ಕಾಲದಲ್ಲಿದ್ದ ಕಪಿಗಳೆಲ್ಲಾ ಕ್ರಮೇಣ ಮಂಗನಿಂದ ಮಾನವ ಅಂತಾರಲ್ಲ ಹಾಗೆ ಮನುಷ್ಯರಾಗಿ ಪರಿವರ್ತನೆ ಹೊಂದಿ ನದೀ ತೀರದ ಮರಗಳನ್ನೆಲ್ಲಾ ಕಡಿದು ಗೇಟೆಡ್ ಕಮ್ಯುನಿಟಿ ಅಂತ ಕಟ್ಕೊಂಡು ಆ ಮನೆಗಳ ಕಲುಷಿತ ನೀರನ್ನು ನದೀಗೇ ಬಿಡ್ತಾ ನೆಮ್ಮದಿಯಾಗಿವೆ. ಈಗ ಅಲ್ಲಿ ಹಕ್ಕಿಗಳಿಗಾಗಲೀ, ಗಿಳಿಗಳಿಗಾಗಲೀ, ಇನ್ಯಾವುದೇ ರೀತಿಯ ಪಕ್ಷಿಗಳಿಗಾಗಲೀ ಜಾಗವೇ ಇಲ್ಲ.



■

# ಮಂಕಿಗೆ ಮಾರಲ್ಸ್ ಇಲ್ಲ



ಟಿ.ಪಿ.ಕೈಲಾಸಂರವವರ ಶೈಲಿಯಲ್ಲಿ
ಅಣಕು ಬರಹ ರಚನೆ : **ಎಂ. ಎಸ್. ನರಸಿಂಹ ಮೂರ್ತಿ**

ಒನ್ಸ್ ದೇರ್ ವಾಸ್ ಎ ರಿವರ್ ಗೋದಾವರಿ! ಒನ್ಸ್ ಅಂತ ಟೆನ್ಸ್ ಆಗಬೇಡಿ, ಈಗಲೂ ರಿವರ್ ಇದೆ. ಒಂದು ಕಾಲಕ್ಕೆ ಪನ್ನೀರು ಥರ ಇದ್ದ ವಾಟರು ಈಗ ಹಿನ್ನೀರು ಆಗಿದೆ. ಗಾಡ್ ಮೇಡ್ ಸ್ವೀಟ್ ರಿವರ್ ಅಂಡ್ ಮ್ಯಾನ್ ಮೇಡ್ ಇಟ್ ಸವರ್!

ಗೋದಾವರಿ ರಿವರ್ ದಡದಲ್ಲಿ ಒಂದು ಬಡಾ ಬ್ಯಾನಿಯನ್ ಟ್ರೀ, ನಮ್ಮ ಅಜ್ಜನ ಕಾಲದ್ದು, ಅಜ್ಜ ಏನ್ಬಂತು, ಅವರಜ್ಜನಿಗಿಂತ ಓಲ್ಡು. ಕತ್ತೆತ್ತಿ ನೋಡಿದರೆ ಕತ್ತು ಉಳುಕೋಷ್ಟು ಮರದ ಹೈಟು! ಆ ಬಿಗ್ ಬ್ಯಾನಿಯನ್ ಟ್ರೀ ನಲ್ಲಿ ಫ್ಲಾಕ್ ಆಫ್ ಬರ್ಡ್ಸ್‌ಉ ! ಕುಕೂ, ಕ್ರೋ, ಡವ್ವು... ಪ್ಯಾರೆಟ್ಟು... ಒಟ್ಟಾರೆ ಹೇಳೋದಾದ್ರೆ ಸೀನಿಯರ್ ಸಿಟಿಜನ್ ಥರ ವಾಕ್ ಮಾಡೋ ಪೆಂಗ್ವಿನ್ ಪಕ್ಷಿ ಬಿಟ್ಟು ಉಳಿದೆಲ್ಲಾ ಬರ್ಡ್ಸ್ ಆ ಮರದಲ್ಲಿ ಹ್ಯಾಪಿಯಾಗಿ ಲೈಫ್ ಲೀಡ್ ಮಾಡ್ತಾ ಇದ್ದವು. ದೊಡ್ಡ ಪಕ್ಷಿಗಳು ಡಾನ್‌ನಲ್ಲಿ ಸಿಂಗ್ ಮಾಡ್ತಾ ಹೊರಟರೆ ಡಸ್ಕ್ ಆಗೋ ಮುಂಚೆ ಗೂಡು ಸೇರ್ತಿದ್ದವು.

ಟ್ರೆಸ್‌ಪಾಸರ್ಸ್‌ನ ಬೆದರಿಸೋಕೆ ಗೂಗೂ–ಗೂಬೇನೂ ಆ ಬ್ಯಾನಿಯನ್ ಟ್ರೀನಲ್ಲಿ ಗೂಬೆ ಕಣ್ ಬಿಟ್ಕೊಂಡು ದ್ರಾಬೆಯಾಗಿ ಕೂತಿರ್ತಿತ್ತು. ಅಗಲ ರೆಕ್ಕೆಯ ಈಗಲ್ಲು ಇಲ್ಲೀಗಲ್ ಆಗಿ ಆಗಾಗ ಬರ್ತಿತ್ತು.

ಲಾಗಾಯ್ತಿನಿಂದ ಇದ್ದ ಈ ವೃಕ್ಷಾನಂದಕ್ಕೆ ಬ್ರೇಕ್ ಬೀಳೋ ಥರ ಒಮ್ಮೆ ಮಳೆ ಬಂತು. ಆಕಾಶದಲ್ಲಿ ಕಪ್ಪು ಕ್ಲೌಡ್‌ಗಳು ಒಂದಕ್ಕೊಂದು ಗುಮಕಿ, ಮುಂದೆ ಲೈಟು ಹಿಂದೆ ಸೌಂಡು ಬಿಟ್ಟು, ಥಂಡರ್, ವಂಡರ್ ತೋರಿಸಿ ಧೋ ಅಂತ ಮಳೆ ಸುರೀತು. ‘ಇಳಿದು ಬಾ ತಾಯಿ ಇಳಿದು ಬಾ’ ಅಂತ ಯಾವ ಭಗೀರಥಾನೂ ರಿಕ್ವೆಸ್ಟ್ ಮಾಡಿರಲಿಲ್ಲ. ಆದರೆ ಅದು ಕಾರ್ತಿಕಮಾಸ ! ಕಾರ್ತಿಕದಲ್ಲಿ ಎಲ್ಲು ಕೂತ್ರೂ ವಾಟರ್ರೇ ! ಆಕಾಶಕ್ಕೆ ತೂತು ಹೊಡೆದಂತೆ ಹೆವಿ ಡೌನ್ ಪೋರು ! ಮೊನ್ನೆ ಮಲಪ್ರಭಾ, ಘಟಪ್ರಭಾ ರಿವರ್ ಫ್ಲಡ್ ಆದಾಗ ಅನೇಕ ಪ್ರಾಣಿಗಳು ಡೆಡ್ ಆಗಿದ್ದವು. ಮಂಕೀಸು ಬಾಲ ಮುದುರ್ಕೊಂಡು ನಡುಗಡ್ಡೆಗೆ ಹಾರಿ ಜೀವ ಉಳಿಸ್ಕೊಂಡು ಬ್ರೆಡ್ಡು ಬಟರ್ ಇಲ್ದೆ, ಪಾರ್ಟಿಫೀಲಿಂಗ್ಸ್ ಮರೆತು ನಾವೆಲ್ಲ ಒಂದೇ ಅಂತ ಜಪಿಸ್ತಿತ್ತಲ್ಲ, ಆ ಟೈಪ್ ರೈನು !

ನಮ್ಮ ಕಥಾ ಪ್ರಸಂಗದಲ್ಲಿ ಮಳೆಗೆ ನೆನೆದ ಕೋತಿಗಳು ಟ್ರೀ ಬುಡಕ್ಕೆ ಈಜಿ ಬಂದು, ‘ಶಿವಶಿವಾ.... ಕೋಲ್ಡುವಾ ನೆಗಡಿವಾ’... ಅಂತ ಗಡಗಡ ನಡುಗ್ತಾ ಮರ ಹತ್ತೋಕೆ ಟ್ರೈ ಮಾಡಿದವು.

ಹೋದೆಯಾ ಡೆವಿಲ್ ಅಂದ್ರೆ ಬಂದೆ ಮರದ ಮೇಲಕ್ಕೆ ಅನ್ನೋ ಡೇಂಜರಸ್ ಪೊಸಿಷನ್ನು ಅಲ್ಲಿದ್ದ ಪುಟ್ಟ ಪಕ್ಷಿಗಳಿಗೆ ! ಮರದ ಗೂಡಲ್ಲಿದ್ದ ಹಕ್ಕಿ ಬೇಬೀಸ್‌ಗೆ ಭಯ ಆಗಿ ಅವೆಲ್ಲ ಒಗ್ಗಟ್ಟಾದವು. ತೊಂದರೆ ಬಂದಾಗ ಜಾತಿ, ಕುಲ ಮರೆತು

'ಆಲ್ ಇಸ್ ಫೇರ್ ಇನ್ ಸ್ಟ್ರೈಕ್ ಅಂಡ್ ಪ್ರೊಟೆಸ್ಟ್' ಅಂತ ಒಗ್ಗಟ್ಟಾಗೋ ಕೆಟ್ ಬುದ್ಧಿ ಮನುಷ್ಯರಲ್ಲಿ ಮಾತ್ರ ಅಲ್ಲ, ಪ್ರಾಣಿ ಪಶು ಪಕ್ಷಿಗಳಲ್ಲೂ ಇದೆ ಅನ್ನೋಕೆ ಇದು ಒಂದು ಎಕ್ಸಾಂಪಲ್ಲು !

ಮೈ ಫ್ರೆಂಡ್ಸ್, ಅಪ್ಪ–ಅಮ್ಮ ಹಕ್ಕಿಗಳು ಫುಡ್ ತರೋಕೆ ಗೂಡಿಂದ ಹಾರಿ ಹೋಗಿದ್ವು. ಪೇರೆಂಟ್ಸ್ ಇಲ್ಲದೆ ಪುಟಾಣಿ ಮರಿಗಳು 'ಕೀ ಕೀ' ಅಂತ ಭಯದಲ್ಲಿ ಬಡ್ಕೋತಿದ್ದ ಸಮಯ. ಇಂಥ ಹೆಲ್ಪ್‌ಲೆಸ್ ಸಿಚುಯೇಷನ್‌ನಲ್ಲಿ ಗೂಂಡಾ ಮಂಕೀಸು ಮರದ ಪೊಟರೆಗಳಲ್ಲಿ ಬೆಚ್ಚಗೆ ಇರೋಕೆ ಪ್ಲ್ಯಾನ್ ಮಾಡಿದವು. ಗೂಡುಗಳಿಗೆ ದಾಳಿ ಇಟ್ಟು ಎಗ್ ನ ಈಟ್ ಮಾಡಿ, ನೆಸ್ಟ್ ಕಿತ್ತು ಗಬ್ಬೆಬ್ಬಿಸೋದು ಬ್ಯಾಡ್ ಐಡಿಯಾ. ಬ್ಯಾಡ್ ಏನು ಬಂತು, ವರ್ಸ್ ಗಿಂತ ವರ್ಸ್ಟ್ ಐಡಿಯಾ. ಕಾಂಪ್ರೊಮೈಸ್‌ಗೆ ಪ್ಲ್ಯಾನ್ ಮಾಡಿದ ಪುಟ್ಟ ಪಕ್ಷಿಗಳು ಕೆಟ್ಟ ಕೋತಿಗಳಿಗೆ ಮನವಿ ಮಾಡ್ತು.

"ಎಲೈ ಪಿಂಡ ಕಪಿಗಳೇ, ಸ್ಸಾರಿ, ಪಿಂಡ ಅಲ್ಲ, ಪುಂಡ ಕಪಿಗಳೇ, ನೀವೂ ಸ್ಟ್ರಾಂಗು. ನಿಮ್ಮ ಕೈಕಾಲೂ ಸ್ಟ್ರಾಂಗು. ಲುಕ್ಸು ಟ್ರಿಕ್ಸ್‌ನಲ್ಲಿ ಮನುಷ್ಯನ್ನ ಬಿಟ್ರೆ ನೆಕ್ಸ್ಟ್ ನೀವೇ ! ನಿಮ್ಮಲ್ಲೇ ಕೆಲವು ಮಂಕೀಸ್ ಪ್ರಮೋಷನ್ ಪಡೆದು, ಸ್ಟೇಟಸ್ ಹೆಚ್ಚಿಸಿಕೊಂಡು ಎಲೆಕ್ಷನ್‌ಗೆ ನಿಂತು ಕೆಲವು ಕಡೆ ಲೀಡರ್‌ಗಳಾಗಿ ಸರ್ಕಾರಿ ಸುಖ ಅನುಭವಿಸ್ತಾ ಇವೆ. ವೈ ಡೋಂಟ್ ಯು ಟ್ರೈ? ಶಕ್ತಿಶಾಲಿಗಳು ಟ್ರೀನಲ್ಲಿ ಹೌಸ್ ಮಾಡಿದರೆ ಮಾನ ಇರೊಲ್ಲ. ಬೊಂಬಾಟಾಗಿ ಮನೆಗಳು ಕಟ್ಕೊಂಡು ಮರ್ಯಾದೆಯಾಗಿ ಇರಿ" ಅಂತು.

ಕೋತಿಗಳಿಗೆ ಈ ಮಾತು ಹೌದೆನ್ನಿಸಿತು. ಮೌನಂ ಸಮ್ಮತಿ ಸಿಂಬಲ್ ! ಬರ್ಡ್ಸ್ ತಮ್ಮ ಉಪದೇಶ ಕಂಟಿನ್ಯೂ ಮಾಡ್ತು.

"ಮಂಕಿ ಆಗಿ ಹುಟ್ಟಿದ ಮೇಲೆ ಮಿಕ್ಕವರಿಲ್ಲದಾಗ ನೀವೇ ರಾಜ, ನಿಮ್ಮ ಟೈಲೇ ಚೇಲಾ ! ನಿಮ್ಮ ಕೈಕಾಲೇ ಇನ್ಫೆಂಟ್ರಿ ಕೇವಲ್ರೀ ! ಫ್ರೀ ಹೌಸಸ್ ಕಟ್ಟಿ ಕೊಡೋ ಸ್ಕೀಮ್ ಸರ್ಕಾರದಲ್ಲಿದೆ. ಇದರಿಂದ ಮನೆ ಕಟ್ಟೋವರಿಗೂ ಲಾಭ. ಮನೆಗೆ ಬಿಟ್ಟವರಿಗೂ ಲಾಭ. ಅಧಿಕಾರದಲ್ಲಿ ಮೇಲೆ ನಿಮ್ಮವರೇ ಇರೋದರಿಂದ ನೀವು ಅಪ್ಲೈ ಮಾಡಿದರೆ ಮನೆ ಈಸಿ ಆಗಿ ಸಿಗುತ್ತೆ, ಆಗ ಜಗತ್ತು ನೆಮ್ಮದಿಯಾಗಿರುತ್ತೆ" ಅಂತ ಗೋಗರೆದವು.

ಕೆಲವು ಸಾವಿರ ವರ್ಷಗಳ ನಂತರ ಆ ಮಂಕೀಸು ರಿವರ್ ಸೈಡ್ ಮರಗಳಿಗೆ ಕೊಡಲಿ ಹಾಕಿ ಇದ್ದ ಬದ್ದ ಗ್ರೀನರಿ ಎಲ್ಲ ಹಾಳುಗೆಡವಿ ಸೈಟುಗಳು ಮಾಡಿ, ಮನೆ ಕಟ್ಕೊಂಡು, ಗೇಟೆಡ್ ಕಮ್ಯೂನಿಟಿ ಮಾಡ್ಕೊಂಡು ಮಜವಾಗಿದ್ದವು. ಮರಗಳು ಕಮ್ಮಿ ಆಗಿ, ಪಕ್ಷಿಗಳಿಗೆ ನೆಲೆ ಇಲ್ದೆ, ಅಂತರ್‌ಪಿಶಾಚಿಗಳ ಥರ ಸಿಟಿಗಳಲ್ಲಿ ಹಾರಾಡ್ತಾ, ಹೈ ಟೆನ್ಶನ್ ವೈರ್‌ಗಳಿಗೆ ಸಿಕ್ಕಿ ಹರೋಹರ ಅನ್ನೋ ಸ್ಥಿತಿಗೆ ಬಂದವು.

**ನೀತಿ :**

**ಸ್ವಾರ್ಥಿಗಳಿಗೆ ಸೋನ್‌ಪಪ್ಪಡಿ**

**ಕೊಟ್ರೆ ನಮ್ಮ ತಲೆ ಮೇಲೆ**

**ಬೀಳುತ್ತೆ ಚಪ್ಪಡಿ!**



# ಶ್ರಾವಣದ ಮಂಗ್ಯಾನ ಆಟ



ಬೇಂದ್ರೆಯವರ ಶೈಲಿಯಲ್ಲಿ
ಅಣಕು ಬರಹ ರಚನೆ : **ಕೆ. ಎಸ್. ನಾಗರತ್ನ ಭಟ್**

ಏ ಭಾಳಾ ಬಾ ನಿಂಗೊಂದು ಭಲೋ ಕಥಿ ಹೇಳ್ಬೇಕಂತಿದೀನಿ

ಬ್ಯಾಡಪ್ಪ ನಾ ಆಡ್ಲಿಕ್ ಹೊಂಟೀನಿ

ಬಾರೋ ಈ ಕಥೀ ಸಣ್ಣದಾದ್ರೂ ಭಾಳ ಮಜಾ ಐತಿ ಕೇಳಾರ್ ಕೇಳು

ಹಾ. ಹಂಗಾರ ಹೇಳು. ನಾ ಬ್ಯಾಗ ಆಡ್ಲಿಕ್ ಹೋಗ್ಬೇಕು ಮತ್ತ

ಹಂಗಲ್ಲೋ, ಮಕ್ಳಿಗೆ ಆಟ ಬೇಕು ಹಾಂಗೇ ಪಾಠನೂ ಬೇಕು ಹೌದಲ್ಲೋ

ಹಂಗಾರೆ ಹೇಳಜ್ಜಿ ನಾ ಒಲ್ಲೆ ಅನ್ನಂಗಿಲ್ಲ ಆತಾ

ಒಂದೂರು , ಛಂದದೂರು, ಅದೂ ನಮ್ಮ ಧಾರವಾಡದ್ಹಾಂಗೆ

ಧಾರವಾಡದ್ಹಾಂಗಾ, ಅಲ್ಲಿ ಸಾಧನಕೇರೀನೂ ಇತ್ತಾ

ಸಾಧನಕೇರಿ ಅಲ್ದಿದ್ರೂ ಇನ್ನೊಂದು ಕೇರಿ ಆತಿಲ್ಲೋ, ಆ ಊರಿನ ಬೀದೀಲಿ ಗೋದಾವರಿ ನದೀ ಹರೀತಿತ್ತು. ನದೀ ಅಂದ್ರ ಭಾಳಾ ಛಲೋ ಇತ್ತ ನೋಡು, ನೀರು ಸ್ಫಟಿಕದ್ಹಾಂಗಿತ್ತು. ಆ ನೀರಿನ ಆಸ್ರೆಗೆ ಅಲ್ಲಿದ್ದ ಆಲದ ಮರದಾಗೆ ಹಕ್ಕಿಗೋಳು ಗೂಡು ಕಟ್ಕೊಂಡಿದ್ವು. ಅದರಾಗೆ ಗಿಳಿ, ಗುಬ್ಬಿಗೋಳು ಇದ್ವು. ಹೀಂಗಿರಬೇಕಾದ್ರೆ ಒಮ್ಮೆ ಜೋರು ಮಳಿ ಬಂತು, ಅದೂ ಕಾರ್ತಿಕ ಮಾಸದಾಗೆ. ಕಾರ್ತಿಕ ಅಂದ್ರೆ ನಿಂಗೊತ್ತಲ್ಲ ಪಟಾಕಿ ಹಬ್ಬದ ಟೇಮು ಅಂದ್ರೆ ನಿಂಗೆ ಛಲೋ ನೆನಪಾಗ್ತತಿ.

ಓ ಗೊತ್ ಬಿಡು ಹ್ವಾದ ವರ್ಷ ಮಳಿ ಬಂದು ನನ್ನ ಪಟಾಕಿ ಎಲ್ಲ ಠುಸ್ ಅಂದಿದ್ವಲ್ಲ.

ಹಾಂ ನೊಡು ಇಂಥಾ ಮಳಿಗೆ ಆಜೂಬಾಜೂಕಿನ್ ಮರದಲ್ಲಿ ಇದ್ವಲ್ಲ ಮಂಗಗಳು ಎಲ್ಲಾ ನೆಕ್ಕೋತ ಈ ಮರಕ್ಕೆ ಓಡಿ ಬಂದ್ವು.. ಯಾಕಂದ್ರ ಈ ಮರ ಭಾಳ ದೊಡ್ಡದಿತ್ತು. ಅವಕ್ಕೂ ರಕ್ಷಣೆ ಬೇಕಿತ್ತಲ್ಲ. ಮಂಗಗಳು ಬಂದಿದ್ದು ನೋಡಿ ಹಕ್ಕಿಗಳು ಕೂಗಾಕ್ಕೆ ಹತ್ತಿದ್ವು. ಅವುಗಳ ಪೈಕಿ ಒಂದು ಲೀಡರ್ ಹಕ್ಕಿ ಹೇಳ್ತು. ಖರೆ ಅಂದ್ರೆ ನೀವು ನಮಗಿಂತ ಬಲಶಾಲಿಗಳಿದೀರಿ. ನಿಮ್ಮ ಮಾರಿ ನೋಡಿದ್ರೆ ನೀವು ಏನ್ ಮಾಡ್ಲಿಕ್ಕೂ ತಯಾರಿದೀರಿ. ಈ ಮರಕ್ಕೆ ಬಂದು ನೀವೂ ಯಾಕೆ ನೆನೆಸಿಕೊಳ್ಳಿಕ್ಕೆ ಬೇಕು. ಈ ಉಸಾಬರಿ ಬಿಟ್ಟು ಒಂದ್ ಫುಟ್ ಪಾತ್ ಮನಿ ಕಟ್ಕೊಂಡು ಆರಾಮಗಿರ್ರಿ ಅಂತು. ಆಗ ಅಲ್ಲೇ ಒಬ್ಬ ಮನ್ಸಾ ಹೋಗ್ತಿದ್ನಾ, ಅವಂಗೆ ಈ ಮಾತು ಕೇಳಿಸ್ತು ಅವನಿಗೆ ನಗು ಬಂತು. ಮನಸ್ನಾಗೇ ನಕ್ಕೋತಾ ಯೋಚ್ನೆ ಮಾಡ್ದ. ಅಂಗ್ರೇಜಿ

ಲೆಕ್ಕದ್ದಾಂಗೆ ಹೇಳ್ಬೇಕಂದ್ರ ಎರಡು ಮಿಲಿಯನ್ ವರ್ಷಗಳಾದ್ವು ನೋಡಿ ನಾವು ಮಂಗಗಳಿಂದ ಹಿಂಗೆ ಬದಲಾಗೋಕೆ. ಹಕ್ಕಿಗಳು ಹೇಳ್ದಾಂಗೆ ಸುತ್ತ ಮುತ್ತ ಮನಿ ಕಟ್ಟಿದೀವಿ ಅಂದ್ರ ಆಜೂಬಾಜೂಕಿನ್ ಒಂದು ಮರಾನೂ ಉಳಿದಿಲ್ಲ ಹಂಗೆ ಕಡಿದ್ವಿ. ಮರಗಳೇ ಇಲ್ಲ ಅಂದ್ಮ್ಯಾಲೆ ಹಕ್ಕಿಗಳು ಹ್ಯಾಂಗೆ ಇದ್ದಾವು.

ಅವ್ನ ಮಾತು ಸರಿ ಹೌದಲ್ಲೋ. ಹಕ್ಕಿ ಹೇಳಿದ್ರಾಗೆ ಒಂದು ವ್ಯಂಗ್ಯಾ ಇದ್ರ ಮನ್ಷ ಹೇಳಿದ್ರಾಗೆ ಇನ್ನೊಂದು ವ್ಯಂಗ್ಯಾ ಇತ್ತು ಗೊತ್ತಾತೇನು

ನಂಗೆ ತಿಳಿವಲ್ದು ಬಿಡಜ್ಜಿ ನಾ ಆಡ್ಲಿಕ್ಕೆ ಹೋಗ್ಬೇಕು.


ಹೋಗು ಆಡ್ಕೊಹೋಗು ಆದ್ರ ಇಷ್ಟು ತಿಳಿ. ಸ್ವಾರ್ಥ ಬಿಟ್ಟು ಬದುಕಿದ್ರೆ ನಾವು, ನಮ್ಮ ಜೊತೆ ಪಕ್ಷಿಗೋಳು, ಗಿಡಮರಗೋಳು ಎಲ್ಲಾ ಉಳಿತಾವೆ. ಅದು ನಮಗೂ ಒಳ್ಳೇದು, ಅವಕ್ಕೂ ಒಳ್ಳೇದು ಏನಂತೀ?

ನೀ ಹೇಳಿದ್ಮ್ಯಾಲೆ ಅದು ಒಳ್ಳೇದೇ ಬಿಡಜ್ಜಿ ಅಂದು ಬಾಳ ಓಡಿದ್ದನ್ನು ಕಂಡು ಅಜ್ಜಿ ನಗು ಹರಿಸಿದ್ಲು.



■

# ತಿಂಮನ ತಲೆ



ಬೀಚಿಯವರ ಶೈಲಿಯಲ್ಲಿ
ಅಣಕು ಬರಹ ರಚನೆ : **ಎನ್.ರಾಮನಾಥ್**

---

'ತಿಂಮಾ...'

'ಬುದ್ಧೀ...?'

ತಿಂಮನೇ ಹಾಗೆ. ಯಾರಲ್ಲಿ ಯಾವುದಿಲ್ಲವೋ ಅದನ್ನು ಗುರುತಿಸಿ ಹಾಗೆಯೇ ಕರೆಯುತ್ತಾನೆ. ಹಿಂದೆ ಅವನಿಗೆ ಮಾಲಿಕರಾಗಿದ್ದ ಮಹಾನ್ ಆಲಸಿಯನ್ನು 'ದಣೀ...' ಎಂದು ಕೂಗುತ್ತಿದ್ದನಂತೆ. ಅವರು ದಣಿಯಲಿಲ್ಲ, ನನಗೆ....

'ಗೋದಾವರಿ ಗೊತ್ತೇನೋ?'

'ನನಗೆ ಗೊತ್ತಿಲ್ದೇಯೇನು.... ಶ್ವೇತಾಂಬರಿಯ ತಂಗಿ ಕನಕಾಂಬರಿಯ ಚಿಕ್ಕ ತಂಗಿ'

'ಅವಳಲ್ಲವೋ.... ನದಿ'

'ಗೊತ್ತು. ನೋಡಿದೀನಿ. ಸಂಧ್ಯಾವಂದನೆ ಪುಸ್ತಕದಲ್ಲಿ'

'ಸಂಧ್ಯಾವಂದನೆ ಪುಸ್ತಕದಲ್ಲಿ ನದಿ ಇದೆಯಾ?'

'ಹೂಂ ಬುದ್ಧೀ....'

'ಎಲ್ಬರತ್ತೋ?'

'ಗೋದಾವರ್ಯಾಃ ದಕ್ಷಿಣೇ ತೀರೇ ಅಸ್ಮಿನ್ ವರ್ತಮಾನೇ....'

'ಹೂಂ.ಅದರದೇ ವರ್ತಮಾನ. ಆ ನದಿಯ ಪಕ್ಕದಲ್ಲಿ ಅರಳಿಮರ ಇತ್ತಂತೆ. ಮರದಲ್ಲಿ ಗಿಣಿಗಳು ಗೂಡು ಕಟ್ಟಿಕೊಂಡಿದ್ದವಂತೆ'

'ಹಾವುಗಳು ಬಂದು ಹಾವ್ ಡೂ ಯೂ ಡೂ ಅಂದವಂತೇನು?'

'ಸುಮ್ಮನೆ ಕಥೆ ಕೇಳೋ....'

'ಹೂಂ'

'ಬಹಳ ದಿನ ವಾಸ ಮಾಡಿದ್ದವಂತೆ'

'ಆಗಿನ್ನೂ ರೆಂಟ್ ಕಂಟ್ರೋಲ್ ಇರಲಿಲ್ಲವಲ್ಲ ಬುದ್ಧೀ...' ಕಾಸು ಕೊಟ್ಟರೂ ಮೌನವಾಗಿರಲಾರನವ.

'ಸುಮ್ಮನೆ ಕೇಳೋ. ಒಂದು ದಿನ ಜೋರು ಮಳೆ ಬಂತಂತೆ'

'ಪುಣ್ಯವಂತರಿದ್ದರು ಬಂತು. ಈಗ ನೀವಿದ್ದೀರಿ....' ಕಣ್ಣು ಅಗಲ ಮಾಡಿದೆ. ತಿಂಮ ಮುಖ ಅತ್ತ ತಿರುಗಿಸಿ ಮುಸಿಮುಸಿ ನಕ್ಕ.

'ಮಳೆ ಬಂದಾಗ ನದೀ ತೀರದ ಎಲ್ಲ ಕಪಿಗಳೂ ಬಂದು ಮರದ ಬುಡದಲ್ಲಿ

ಆಶ್ರಯ ಪಡೆದವಂತೆ'

'ಓ! ಆಗಲೇ ಆಶ್ರಯ ಯೋಜನೆ ಜಾರಿಗೆ ಬಂದಿದ್ದಿರಬೇಕು' ನುಡಿದು ನಾಲಿಗೆ ಕಚ್ಚಿಕೊಂಡ ತಿಂಮ.

'ಗಿಣಿಗಳು ಮತ್ತು ಇತರ ಪಕ್ಷಿಗಳು 'ದೇವರು ನಿಮಗೆ ಕೈಕಾಲು ಕೊಟ್ಟಿದ್ದಾನೆ. ಎಲ್ಲಾದರೂ ಮನೆಗಳನ್ನು ಕಟ್ಟಿಕೊಳ್ಳಿ' ಎಂದವಂತೆ'

'ಗಿಣಿ–ಪಕ್ಷಿಗಳು ತಪ್ಪು ಮಾಡಿದವು ಬುದ್ಧೀ...'

'ಹೇಗೋ ತಿಂಮಾ?'

'ಕಪಿಗಳಿಗೆ ಕೈಕಾಲುಗಳ ಜೊತೆಗೆ ಮಂಗಬುದ್ಧಿಯೂ ಇತ್ತು ಬುದ್ಧೀ'

'ಆದರೇನು?'

'ಅವು ಅದೇ ಮರವನ್ನು ಕಡಿದು ಗೇಟೆಡ್ ಕಮ್ಯುನಿಟಿ ಮಾಡಿಕೊಂಡವು. ಬುದ್ಧೀ....'

'ಏನೋ ತಿಂಮಾ?'

'ಹ್ಞ! ಏನಿಲ್ಲ ಬಿಡಿ'

'ಹೇಳೋ ತಿಂಮಾ'

'ನಿಮಗೆ ಹೇಳುವಂಥದ್ದಲ್ಲ'


'ಇರಲಿ ಹೇಳೋ'

'ಬುಧ್ಯಿಲ್ದೋನ್ಗೆ ಬುದ್ಧಿಮಾತಂದ್ರೆ ಬುಡಕ್ಕೇ ಬಡಿಗೆಪೆಟ್ಟು ಬುದ್ಧೀ...'

'ನನ್ನನ್ನ ಬುಧ್ಯಿಲ್ದೋನು ಅಂದ್ಹೇನೋ ತಿಂಮಾ?

'ತಿಳ್ಕೊಳೋವ್ರಿಗೆ ಹೇಳೋ ಅಗತ್ಯ ಇಲ್ಲ ಬಿಡಿ...'

ಮೀಸೆಯಲ್ಲೇ ನಗುತ್ತಾ ಹೊರ ಸಾಗಿದ ತಿಂಮ.



■

TEMPLE OF KNOWLEDGE

# BEECHI VIDYA KENDRA

Email: admin@beechi.in
Web: www.beechi.in
Mob: 9740968677, 9035302302, 9035007003

PLACEMENT SERVICES FOR:

- BFSI
- SOFTWARE
- MANUFACTURING
- AUTOMOBILES
- REAL ESTATE
- HOSPITALITY
- FMCG

## ಬೀಚಿ ಪ್ರಕಾಶನ Beechi Prakashana

| ಪುಸ್ತಕದ ಹೆಸರು | ಲೇಖಕರು | ಬೆಲೆ |
|---|---|---|
| ರೇಡಿಯೋ ನಾಟಕಗಳು | ಬೀಚಿ | 70 |
| ಮಾತ್ರೆಗಳು | ಬೀಚಿ | 125 |
| ತಿಂಮನ ತಲೆ | ಬೀಚಿ | 70 |
| ಹುಚ್ಚು ಹುರುಳು | ಬೀಚಿ | 50 |
| ಸತೀ ಸೂಳೆ | ಬೀಚಿ | 110 |
| ಖಾದಿ ಸೀರೆ | ಬೀಚಿ | 170 |
| ಸತ್ತವನು ಎದ್ದು ಬಂದಾಗ | ಬೀಚಿ | 60 |
| ಕಾಣದ ಸುಂದರಿ | ಬೀಚಿ | 150 |
| ಕಲ್ಲು ಹೇಳಿತು | ಬೀಚಿ | 150 |
| ತಿಂಮ ರಸಾಯನ | ಬೀಚಿ | 120 |
| ದೇವನ ಹೆಂಡ | ಬೀಚಿ | 170 |
| ಮೇಡಮ್ಮನ ಗಂಡ | ಬೀಚಿ | 110 |
| ಟೆಂಟ್ ಸಿನಿಮಾ | ಬೀಚಿ | 100 |
| ಬೆಳ್ಳಿ ತಿಂಮ ನೂರೆಂಟು ಹೇಳಿದ | ಬೀಚಿ | 75 |
| ಮುರಿದ ಬೊಂಬೆ | ಬೀಚಿ | 100 |
| ಸೀತೂ ಮದುವೆ | ಬೀಚಿ | 80 |

| ಪುಸ್ತಕದ ಹೆಸರು | ಲೇಖಕರು | ಬೆಲೆ |
|---|---|---|
| ಲೇವಡಿ ಟ್ರೈಪಿಸ್ಟ್ | ಬೀಚಿ | 100 |
| ಬೆಳ್ಳಿ ಪತ್ರಗಳು | ಬೀಚಿ | 100 |
| ಮಹಾಯುದ್ಧ | ಬೀಚಿ | 100 |
| ಅಮ್ಮಾವ್ರ ಕಾಲ್ಗುಣ | ಬೀಚಿ | 100 |
| ಕತ್ತಲಲ್ಲಿ ಬಂದವಳು | ಬೀಚಿ | 90 |
| ಮಾತನಾಡುವ ದೇವರುಗಳು | ಬೀಚಿ | 75 |
| ಮನೆತನದ ಗೌರವ | ಬೀಚಿ | 100 |
| ಗರತಿಯ ಗುಟ್ಟು | ಬೀಚಿ | 60 |
| ನಂಬರ್ ಐವತ್ತೈದು | ಬೀಚಿ | 60 |
| ಉತ್ತರ ಧ್ರುವ | ಬೀಚಿ | 250 |
| ನರಪ್ರಾಣಿ | ಬೀಚಿ | 75 |
| ನನ್ನ ಭಯಾಗ್ರಫಿ | ಬೀಚಿ | 270 |
| ಹುಲಿಯ ಬೆನ್ನು ಮೇಲಿಂದ | ಬೀಚಿ | 125 |
| ಅಂದನಾ ತಿಂಮ | ಬೀಚಿ | 125 |
| ಹೆಂಡತಿ ನಕ್ಕಾಗ | ಬೀಚಿ | 125 |
| ಕಮಲಮ್ಮನ ಕುಂಕುಮ ಬಲ | ಬೀಚಿ | 125 |

| ಪುಸ್ತಕದ ಹೆಸರು | ಲೇಖಕರು | ಬೆಲೆ |
|---|---|---|
| ಬೀchi ಬುಲ್ಲೆಟಿನ್ | ಕೇಶವ ರಾವ್ | 200 |
| ಬೀchi ತೋಚಿದ್ದು ಗೀಚಿದ್ದು | ಸ್ವಾಮಿ ರಾವ್ ಕುಲ್ಕರ್ಣಿ | 120 |
| ಬೊಂಬಾಟ್ ಬೀಚಿ | ಬೇಲೂರು ರಾಮಮೂರ್ತಿ | 60 |
| ವಾಗ್ಬಾಣಗಳು | ಗಂಗಾವತಿ ಪ್ರಾಣೇಶ್ | 50 |
| ನಗಿಸುವವನ ನೋವುಗಳು | ಗಂಗಾವತಿ ಪ್ರಾಣೇಶ್ | 50 |
| ಪೋಲೀಸ್ ಎನಕೌಂಟರ್ | Dr..ಡಿ.ವಿ.ಗುರುಪ್ರಸಾದ್ IPS | 200 |
| ಪೋಲೀಸ್ ಜೀವನದಲ್ಲಿ ಹಾಸ್ಯ | Dr.ಡಿ.ವಿ.ಗುರುಪ್ರಸಾದ್ IPS | 200 |
| ವಿಶ್ವಪರ್ಯಟನೆ | Dr.ಡಿ.ವಿ.ಗುರುಪ್ರಸಾದ್ IPS | 300 |
| ರಾಜೀವ್ ಗಾಂಧಿ ಭೀಕರ ಹತ್ಯಾ | Dr.ಡಿ.ವಿ.ಗುರುಪ್ರಸಾದ್ IPS | 250 |

ಇಂಗ್ಲಿಷ್ ಮೂಲ: ಪದ್ಮಶ್ರೀ ಡಿ ಆರ್ ಕಾರ್ತಿಕೇಯನ್

**ಪ್ರತಿಗಳಿಗೆ ಸಂಪರ್ಕಿಸಿ.: 9845264304**